ಸದಸ್ಯರಾದ ಡಾ. ಎನ್ ನರಸಿಂಹಮೂರ್ತಿರವರು ಓಂಕಾರ್ ಮಹಾವಿದ್ಯಾಲಯ ಕುರಿತಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ, ಈ ಮಹಾವಿದ್ಯಾಲಯ 2020–21ನೇ ಸಾಲಿನ ಸಂಯೋಜನಾ ನವೀಕರಣ ಪಡೆದಿರುವುದಿಲ್ಲ. ಕಾರಣ ಈ ಮಹಾವಿದ್ಯಾಲಯವನ್ನು ಹೊಸ ಮಹಾವಿದ್ಯಾಲಯವೆಂದು ಪರಿಗಣಿಸ ಬೇಕಾಗುತ್ತದೆ ಎಂದು ಹೇಳಿದರು. ಕುಲಸಚಿವರು ವಿವರಣೆ ನೀಡಿ, ಈ ಮಹಾವಿದ್ಯಾಲಯ 2020–21 ನೇ ಸಾಲಿನ ಮುಂದುವರಿಕೆ ಸಂಯೋಜನೆ ಕುರಿತಂತೆ ನಿಯಮಾವಳಿಗಳ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಉಳಿದಂತೆ ಚರಣ್ ಶಿಕ್ಷಣ ಮಹಾವಿದ್ಯಾಲಯ ಹಾಗೂ ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಕೋರಲಾದ ಮಾಹಿತಿಯನ್ನು ನೀಡಲಾಯಿತು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ದಿನಾಂಕ 21.01.2021 ರಂದು ಜರುಗಿದ 3ನೇ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆ, ದಿನಾಂಕ 23.02.2021 ಹಾಗೂ ದಿನಾಂಕ 31.03.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಗಳು ಮತ್ತು ದಿನಾಂಕ 05.05.2021 ಹಾಗೂ ದಿನಾಂಕ 07.06.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಆನ್ ಲೈನ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಕ್ರಮದ ಅನುಸರಣಾ ವರದಿಗಳಿಗೆ ಸಭೆ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ 3: ವಿದ್ಯಾವಿಷಯಕ ಪರಿಷತ್ತಿನ ಸ್ಥಾಯಿ ಸಮಿತಿಯನ್ನು ಪುನರ್ ರಚಿಸಿರುವ ಕ್ರಮದ ಅನುಮೋದನೆ ಕುರಿತು

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ವಿದ್ಯಾವಿಷಯಕ ಪರಿಷತ್ ಸಮಿತಿಯ ಪುನರ್ ರಚನೆಗೆ ಸರ್ವಾನುಮತದ ಅನುಮೋದನೆ ನೀಡಿ ದೃಢೀಕರಿಸಲಾಯಿತು.**

ವಿಷಯ ಸಂಖ್ಯೆ 4: ದಿನಾಂಕ 08.09.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಮಿತಿಯ ಕೆಳಕಂಡ ವಿಷಯಗಳ ನಡವಳಿಗಳನ್ನು ಅನುಮೋದಿಸುವ ಕುರಿತು

**4(1):** ಭಾರತ ಸರ್ಕಾರ ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020ಯನ್ನು ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಿರು ಕುರಿತು.

ರಾಷ್ಟ್ರೀಯ ಶಿಕ್ಷಣ ನೀತಿ–2020ಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಿ ಹೊರಡಿಸಿದ ಸರ್ಕಾರದ ಆದೇಶ ಹಾಗೂ ಈ ಕುರಿತು ವಿಶ್ವವಿದ್ಯಾನಿಲಯ ಕೈಗೊಂಡ ಕ್ರಮಗಳ ಕುರಿತು ಕೆಳಗಿನ ವಿಷಯಗಳನ್ನು ಕುಲಪತಿಗಳು ವಿಸ್ತೃತವಾಗಿ ಸಭೆಗೆ ವಿವರಿಸಿದರು.

- ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಷ್ಠಾನಗೊಳಿಸಲು ಕಾರ್ಯಪಡೆ(Task Force) ರಚಿಸಿರುವುದು.
- ಮಹಾವಿದ್ಯಾಲಯಗಳು/ವಿಶ್ವವಿದ್ಯಾನಿಲಯದ ಶಿಕ್ಷಕರಿಗೆ NEP 2020 ಕುರಿತು ಅಗತ್ಯ ಮಾಹಿತಿ ನೀಡಲು ಕಾರ್ಯಾಗಾರಗಳನ್ನು ನಡೆಸಲಾಗಿರುವುದು.
- ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರತ್ಯೇಕವಾದ Folder ಪ್ರಾರಂಭಿಸಲಾಗಿದೆ ಹಾಗೂ ಇದರಲ್ಲಿ ಅಗತ್ಯ ಮಾಹಿತಿಗಳನ್ನು ಅಳವಡಿಸಲಾಗಿರುವುದು.
- ವಿವಿಧ ಅಧ್ಯಯನ ಮಂಡಳಿ ರಚಿಸಿ, ರಾಷ್ಟ್ರೀಯ ಶಿಕ್ಷಣ ನೀತಿ–2020ಗೆ ಅನುಗುಣವಾಗಿ ಪಠ್ಯಕ್ರಮ ರಚಿಸಲು ತಿಳಿಸಲಾಗಿರುವ ವಿಷಯ
- ಪಠ್ಯಕ್ರಮದಲ್ಲಿ Skill Development ಮತ್ತು Ability Enhancement ಗಳಿಗೆ ವಿಶೇಷ ಒತ್ತು ನೀಡಿರುವ ವಿಷಯ
- ವಿದ್ಯಾರ್ಥಿಗಳಿಗೆ ಕ್ರೆಡಿಟ್ ವರ್ಗಾವಣೆಗೆ ಹಾಗೂ multiple entry-exit ಗಳಿಗೆ ಅವಕಾಶ ನೀಡಲಾಗಿದ್ದು ಇದರಿಂದಾಗಿ ವಿದ್ಯಾರ್ಥಿಗಳು ಪ್ರತಿಯೊಂದು ವರ್ಷದ ವ್ಯಾಸಂಗದ ನಂತರ ಓದು ನಿಲ್ಲಿಸಿ ಪ್ರಥಮ ವರ್ಷ ಪೂರ್ಣಗೊಳಿಸಿದ್ದಲ್ಲಿ Certificate ಪ್ರಮಾಣಪತ್ರ, ಎರಡನೇ ವರ್ಷ ಪೂರ್ಣಗೊಳಿಸಿದ್ದಲ್ಲಿ Diploma ಪ್ರಮಾಣಪತ್ರ, ಮೂರನೇ ವರ್ಷ ಪೂರ್ಣಗೊಳಿಸಿದ್ದಲ್ಲಿ ಪದವಿ ಪ್ರಮಾಣಪತ್ರ, ನಾಲ್ಕನೇ ವರ್ಷ ಪೂರ್ಣಗೊಳಿಸಿದ್ದಲ್ಲಿ Honors ಪದವಿ ಪ್ರಮಾಣಪತ್ರ ಪಡೆಯಲು ಅವಕಾಶವಿರುತ್ತದೆ. ಇದಲ್ಲದೆ ವಿದ್ಯಾರ್ಥಿ ಕೆಲ ಸಮಯದ ನಂತರ ಓದು ಮುಂದುವರೆಸಲು ಅವಕಾಶ ನೀಡಲಾಗಿದೆ.
- ರಾಷ್ಟ್ರೀಯ ಶಿಕ್ಷಣ ನೀತಿಯ 4 ಸ್ಥಂಭಗಳು – Access – Equity- Quality – Affordability & Accountablity
- ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತರುವುದು ಹಾಗೂ GER ಪ್ರಮಾಣವನ್ನು ಹೆಚ್ಚಿಸವುದು ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶವನ್ನು ತಿಳಿಸಿದರು.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಾಗಿದೆ. ಅದನ್ನು ವಿಶ್ವವಿದ್ಯಾನಿಲಯದಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಅನುಷ್ಠಾನದಲ್ಲಿ ತರಲಾಗಿದೆ ಎಂದು ತಿಳಿಸಿದರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಶ್ರೀ ತಿಪ್ಪೆಸ್ವಾಮಿ ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿಗೊಳಿಸಲಾಗಿದೆ ಎಂಬ ಭಾವನೆ ಇದೆ, ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳನ್ನೂ ಗಮನದಲ್ಲಿಟ್ಟುಕೊಂಡು ಅನುಷ್ಠಾನಗೊಳಿಸಬೇಕಾಗಿತ್ತು ಎಂದು ಹೇಳಿದರು. ಇದಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಕಷ್ಟು ಅನುದಾನದ ಅಗತ್ಯವಿದೆ, ಈ ಕುರಿತು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ವಿಶ್ವವಿದ್ಯಾನಿಲಯ ಹಾಗೂ ಮಹಾವಿದ್ಯಾಲಯಗಳ ಎಲ್ಲಾ ಶಿಕ್ಷಕರು ಒಂದು ತಂಡವಾಗಿ ಕಾರ್ಯೋನ್ಮುಖರಾಗಬೇಕು ಮತ್ತು ಸರ್ಕಾರಕ್ಕೆ ಹಾಗೂ ವಿಶ್ವವಿದ್ಯಾಲಯಕ್ಕೆ ಈ ಕುರಿತು ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕು. ಈಗಿರುವ ಶಿಕ್ಷಕರಲ್ಲಿ ಸುಮಾರು 60–70% ಶಿಕ್ಷಕರು ಹಂಗಾಮಿ ಅಥವಾ ಅತಿಥಿ ಉಪನ್ಯಾಸಕರಾಗಿದ್ದಾರೆ ಖಾಯಂ ಶಿಕ್ಷಕರ ನೇಮಕಾತಿ ಆಗದೇ ಇದ್ದರೆ ಗುಣಮಟ್ಟದ ಶಿಕ್ಷಣ ನೀಡಲು

ಸಾಧ್ಯವಾಗುವುದಿಲ್ಲ. ಈ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸ ಬೇಕಾಗಿತ್ತು ಎಂದು ಹೇಳಿದರು. ಕೇಂದ್ರ ಸರ್ಕಾರ ಸಂಶೋಧನೆಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಾಯೋಜಿತ ಯೋಜನೆಗಳನ್ನು ಅನುಷ್ಠಾನದಲ್ಲಿ ತಂದಿದೆ. ವಿಶ್ವವಿದ್ಯಾನಿಲಯ ಅವುಗಳನ್ನು ಪಡೆದು ಸಂಶೋಧನೆ ಕುರಿತಂತೆ ಕಾರ್ಯಕ್ರಮಗಳನ್ನು ರಚಿಸಬೇಕೆಂದು ತಿಳಿಸಿದರು. ವಾಣಿಜ್ಯ ವಿಭಾಗದವರು ಸಹ ಔದ್ಯೋಗಿಕ ಹಾಗೂ ತೆರಿಗೆಗಳಿಗೆ ಸಂಬಂಧಿಸಿದಂತೆ ಹೊಸ ವ್ಯಾಸಂಗಗಳನ್ನು ಜಾರಿಯಲ್ಲಿ ತರುವ ಕುರಿತು ಚಿಂತಿಸಬೇಕೆಂದು ಹೇಳಿದರು.

ಸದಸ್ಯರಾದ ಶ್ರೀಮತಿ ಎನ್. ಪಾರ್ವತಿ ಅವರು ಮಾತನಾಡಿ, ಉನ್ನತ ಶಿಕ್ಷಣ ಮತ್ತು ಶಾಲಾ ಶಿಕ್ಷಣಗಳು ಸಹಬಾಂಧವ್ಯ ಹೊಂದಿರಬೇಕು. ವಿಶ್ವವಿದ್ಯಾನಿಲಯದ ಪಠ್ಯಕ್ರಮಗಳನ್ನು ರಚಿಸುವಾಗ ಶಾಲಾ ಶಿಕ್ಷಕರನ್ನು ತೊಡಗಿಸಿ ಕೊಳ್ಳಬೇಕೆಂದು ಹೇಳಿದರು.

ಸದಸ್ಯರಾದ ಡಾ. ಮುನಿನಾರಾಯಣಪ್ಪ, ಮತ್ತು ಡಾ. ಮುನಿರಾಜುರವರು ಮಾತನಾಡಿ ಈಗಾಗಲೇ ವಿಶ್ವವಿದ್ಯಾನಿಲಯ ವಾಣಿಜ್ಯ ವಿಭಾಗದ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿ ಹೊಸ ಹೊಸ ಕೋರ್ಸುಗಳನ್ನು ಜಾರಿಯಲ್ಲಿ ತರಲಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಚರ್ಚೆಯನ್ನು ಸಮಾಪನಗೊಳಿಸುತ್ತಾ, ಸದಸ್ಯರ ಸಲಹೆಗಳು ಮೌಲಿಕವಾಗಿದ್ದು ಅವುಗಳನ್ನು ಜಾರಿಗೆ ತರಲು ಈಗಾಗಲೇ ಯೋಜಿಸಲಾಗಿದೆ. ವಿಶ್ವವಿದ್ಯಾನಿಲಯ ಹಾಗೂ ಔದ್ಯೋಗಿಕ ಸಂಸ್ಥೆಗಳೊಂದಿಗೆ ಹಾಗೂ ವಿಶ್ವವಿದ್ಯಾನಿಲಯ ಮತ್ತು ಸಮುದಾಯದೊಂದಿಗೆ ಸಹಬಾಗಿತ್ವ ಹಾಗೂ ಸಮನ್ವಯ ಕುರಿತಂತೆ ಹೊಸ ಶಿಕ್ಷಣ ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು. ಇದಲ್ಲದೆ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (National Research Foundation) ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಅಡಿಯಲ್ಲಿ ಸಂಶೋಧನೆಗಳಿಗೆ ಅನುದಾನ ನೀಡುವ ವ್ಯವಸ್ಥೆ ಜಾರಿಗೆ ಬರುತ್ತದೆ ಎಂದು ಹೇಳಿದರು.

ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:

**ಚರ್ಚೆಯ ನಂತರ, ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಿರುವ ವಿಷಯವನ್ನು ವಿವರವಾಗಿ ಚರ್ಚಿಸಿದ ಸಭೆಯು ಕರ್ನಾಟಕ ಸರ್ಕಾರದ ಆದೇಶದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು 2021-22ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ಮತ್ತು ಈ ಕುರಿತು ಸರ್ಕಾರ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಕಾಲಕಾಲಕ್ಕೆ ಹೊರಡಿಸುವ ಬದಲಾವಣೆ/ಸೂಚನೆ/ಸುತ್ತೋಲೆಗಳು ಹಾಗೂ ಕರಡು ಪರಿನಿಯಾಮಾವಳಿಗಳನ್ನು ಅನುಸರಿಸಿ ಕುಲಪತಿಗಳು ಅಗತ್ಯ ಕ್ರಮ ವಹಿಸಬಹುದೆಂಬ ವಿದ್ಯಾವಿಷಯಕ ಪರಿಷತ್ ಸಮಿತಿಯ ತೀರ್ಮಾನಕ್ಕೆ ಸಭೆ ಸರ್ವಾನುಮತದ ಅನುಮೋದನೆ ನೀಡಿತು.**

4(2) : ನಗರದ ಮಲ್ಲೇಶ್ವರಂ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ವಿಶ್ವವಿದ್ಯಾನಿಲಯದ ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜನ್ನು ಪ್ರಾರಂಭಿಸುವ ಕುರಿತು.

ಕುಲಪತಿಗಳು ಈ ಕುರಿತು ವಿವರಿಸಿ, ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ ಬಹುಶಿಸ್ತೀಯ ಘಟಕ ಮಹಾವಿದ್ಯಾಲಯವನ್ನು ಪ್ರಾರಂಭಿಸಲು, ಮಲ್ಲೇಶ್ವರಂ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸಲಾಗಿರುವ ನೂತನ ಕಟ್ಟಡವನ್ನು ವಿಶ್ವವಿದ್ಯಾನಿಲಯಕ್ಕೆ ವಹಿಸಿ ಸರ್ಕಾರ ಅನುಮತಿ ನೀಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅದರಂತೆ 2021–22ನೇ ಸಾಲಿನಿಂದ ವಿಶ್ವವಿದ್ಯಾನಿಲಯದ ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದರು ಸರ್ಕಾರದ ಈ ಕ್ರಮವನ್ನು ಸಭೆ ಸ್ವಾಗತಿಸಿ ಧನ್ಯವಾದಗಳನ್ನು ಅರ್ಪಿಸಿತು.

ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ವಿಶ್ವವಿದ್ಯಾನಿಲಯದ ವಿವಿಧ ವಿಧಾನ ಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸ್ಥಳ/ಕಟ್ಟಡಗಳನ್ನು ಗುರುತಿಸಿ ವಿಶ್ವವಿದ್ಯಾನಿಲಯಕ್ಕೆ ನೀಡಿದಲ್ಲಿ ಮಾದರಿ ಬಹುಶಿಸ್ತೀಯ ಘಟಕ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು. ಕುಲಪತಿಗಳು ಸಹ ಇಂತಹ ಮಹಾವಿದ್ಯಾನಿಲಯಗಳ ಪ್ರಾರಂಭದಿಂದ ಸಮಾಜದ ಕೆಳಹಂತದ ಸಮುದಾಯಕ್ಕೆ ಉತ್ತಮ ಶಿಕ್ಷಣ ನೀಡಲು ಅವಕಾಶವಾಗುತ್ತದೆ ಎಂದು ತಿಳಿಸಿ ಈ ಕುರಿತು ಅಗತ್ಯ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಕೇಂದ್ರ ಸರ್ಕಾರದ ಸರ್ವಶಿಕ್ಷಣ ಅಭಿಯಾನ ಮಾದರಿಯಲ್ಲಿ ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ (RUSA) ಯೋಜನೆ ಅಡಿಯಲ್ಲಿ ಹಲವಾರು ಶೈಕ್ಷಣಿಕ ಯೋಜನೆಗಳನ್ನು ಜಾರಿಯಲ್ಲಿ ತರಲು ಅವಕಾಶವಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿರವರು NEP ಮಾದರಿಯಲ್ಲಿ Combination ಪದ್ಧತಿ ಇಲ್ಲದಿರುವುದರಿಂದ, ಮಹಾವಿದ್ಯಾಲಯದ ಪ್ರವೇಶ ಅಧಿಸೂಚನೆಯಲ್ಲಿ ವಿಷಯಗಳನ್ನು ಮಾತ್ರ ನಮೂದಿಸಬೇಕಾಗಿತ್ತು. ಎಂದು ಹೇಳಿದರು. ಕುಲಪತಿಗಳು ವಿವರಣೆ ನೀಡಿ, NEP ಅನುಸಾರವಾಗಿ ಪರಿನಿಯಮಾಳಿಗಳನ್ನು ಅನುಮೋದಿಸುವವರೆಗೆ ತಾಂತ್ರಿಕವಾಗಿ ಪ್ರಸ್ತುತ ಪರಿನಿಯಮಗಳ ಪ್ರಕಾರ ಕ್ರಮವಹಿಸಲಾಗಿದೆ, ಆದಾಗ್ಯೂ ಅಧಿಸೂಚನೆಯ ಅಡಿಟಿಪ್ಪಣಿಯಲ್ಲಿ, ಅಧಿಸೂಚನೆಯಲ್ಲಿ ನಮೂದಿಸಿದ ವಿಷಯಗಳು NEP-2020 ಅನುಸಾರ ರಚಿಸುವ ನಿಯಮಾವಳಿಗಳಿಗೆ ಒಳಪಡುತ್ತವೆ ಎಂದು ನಮೂದಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ಚರ್ಚೆಯ ನಂತರ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಇಡಿ 273 ಯುಬಿವಿ 2020–21 ದಿನಾಂಕ 07.08.2021 ರಂತೆ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2020 ಪರಿಚ್ಛೇದ 4(viii) ಅಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ನಗರದ ಮಲ್ಲೇಶ್ವರಂ 13ನೇ ಕ್ರಾಸ್ ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡದಲ್ಲಿ ವಿಶ್ವವಿದ್ಯಾನಿಲಯದ ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜನ್ನು ರಾಷ್ಟ್ರೀಯ ಶಿಕ್ಷಣ ನೀತಿ–2020 ಆಧಾರಿತ ವ್ಯಾಸಂಗವನ್ನು 2021–22 ರ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಮತ್ತು ಈ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಸಿದ್ಧಪಡಿಸುವ ಮಾದರಿ ಪರಿನಿಯಾಮಾಳಿ ಹಾಗೂ ಪಠ್ಯಕ್ರಮಗಳ ಅನುಸಾರ, ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ನಿರ್ಣಯ ಸೂಚನೆಗಳ ಪ್ರಕಾರ ಕ್ರಮಕೈಗೊಳ್ಳಲು ಮತ್ತು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ವಿವಿಧ ಕೋರ್ಸ್ / ವಿಷಯಗಳನ್ನು ಪ್ರಾರಂಭ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡುವ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ತೀರ್ಮಾನವನ್ನು ಸಭೆ ಅನುಮೋದಿಸಿತು.**

4(3): ಮರು ಮೌಲ್ಯಮಾಪನಕ್ಕೆ ನಿಗಧಿಪಡಿಸಿದ 15%ಕ್ಕಿಂತ ಕಡಿಮೆ ಅಂಕ ಪಡೆದಿರುವ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅವಕಾಶ ನೀಡಲು ಕೋರಿ ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸುವ ಕುರಿತು.

ಕುಲಪತಿಗಳು (ಮೌಲ್ಯಮಾಪನ) ರವರು ವಿಷಯವನ್ನು ಕೋವಿಡ್-19ರ ಲಾಕ್‌ಡೌನ್ ಕಾರಣದಿಂದ ಸರಿಯಾಗಿ ವರ್ಗಗಳು ನಡೆಯದಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಶೇಕಡ 15% ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅವಕಾಶ ನೀಡಲು ಬೇಡಿಕೆ ಸಲ್ಲಿಸಿರುವುದನ್ನು ಮತ್ತು ಇದೇ ರೀತಿಯ ಮನವಿಗಳು ಕಾಲೇಜಿನ ಪ್ರಾಂಶುಪಾಲರಿಂದ ಬಂದಿರುವುದನ್ನು ತಿಳಿಸಿ ದಿನಾಂಕ 08.09.2021 ರಂದು ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ ಅನುಮೋದನೆ ನೀಡಿರುವುದನ್ನು ಸಭೆಗೆ ವಿವರಿಸಿದರು.

ಸದಸ್ಯರಾದ ಡಾ. ಎನ್ ನರಸಿಂಹಮೂರ್ತಿಯವರು 15% ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳ ಮರು ಮೌಲ್ಯಮಾಪನಕ್ಕೆ ಅವಕಾಶ ನೀಡುವುದು ಸರಿಯಲ್ಲ. ಮುಂದೆ ಸಹ ಇದೇ ರೀತಿಯ ಮನವಿಗಳು ಸ್ವೀಕರಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ಸದಸ್ಯರಾದ ಡಾ. ವಿ.ಆರ್. ದೇವರಾಜು, ಡಾ. ಕೆ.ಎಂ ಮಹೇಶ್, ಡಾ. ಸುಪ್ರೀತ ಕಿತ್ತನಕೆರೆ, ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್, ಡಾ. ಕೆ. ಶಿವಣ್ಣ, ಡಾ. ಎಂ. ಮುನಿನಾರಾಯಣಪ್ಪ, ಡಾ. ಎಂ. ಮುನಿರಾಜು, ಮುಂತಾದವರು ಮಾತನಾಡಿ ಈಗಿನ 15% ಮಿತಿ ಸರಿಯಾಗಿದೆ ಆದರೆ ಪ್ರಸ್ತುತ ಕೋವಿಡ್-19ರ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪಾಠ ಪ್ರವಚನಗಳಲ್ಲಿ ಹಿನ್ನಡೆಯಾಗಿರುವ ಹಿನ್ನಲೆಯಲ್ಲಿ ವಿದ್ಯಾವಿಷಯಕ ಪರಿಷತ್ ಸಮಿತಿಯ ತೀರ್ಮಾನವನ್ನು ಪರಿಗಣಿಸಬಹುದು ಎಂದು ಸಲಹೆ ನೀಡಿದರು.

ಕುಲಪತಿಗಳು ಈ ಕುರಿತು ವಿವರಿಸಿ ಗುಣಮಟ್ಟ ಹಾಗೂ ಮಾನದಂಡಗಳನ್ನು ಕಾಪಾಡುವುದು ಯಾವುದೇ ಸಂಸ್ಥೆಯ ಪ್ರಥಮ ಪ್ರಾಶಸ್ತ್ಯವಾಗಬೇಕು ಎಂದು ತಿಳಿಸಿದರು ಈ ಕುರಿತು ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದೆ. ಈ ವರ್ಷದ ಕೋವಿಡ್-19 ಕಾರಣದಿಂದ ಜಾಗತಿಕವಾದ ವಿಷಮ ಪರಿಸ್ಥಿತಿ ಉಂಟಾಗಿದ್ದು, ಈ ಹಿನ್ನಲೆಯಲ್ಲಿ ವಿದ್ಯಾವಿಷಯಕ ಪರಿಷತ್ತಿನ ಸಮಿತಿ ಶೇಕಡ 15% ಕ್ಕಿಂತ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ತೀರ್ಮಾನ ಕೈಗೊಂಡಿದೆ. ಇದು ಈ ಪರೀಕ್ಷೆಗೆ ಮಾತ್ರ ಸೀಮಿತಗೊಂಡ ಒಂದು ಸಲದ ಕ್ರಮವಾಗಿದೆ ಎಂದು ಹೇಳಿದರು.

ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:

ಚರ್ಚೆಯ ನಂತರ ಒಂದು ಸಲದ ಕ್ರಮವಾಗಿ (**One Time Measure**) ಸ್ನಾತಕ / ಸ್ನಾತಕೋತ್ತರ ಪರೀಕ್ಷೆಯಲ್ಲಿ ಶೇಕಡ 15% ಕ್ಕಿಂತ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಅವಕಾಶ ನೀಡುವ ವಿದ್ಯಾವಿಷಯಕ ಪರಿಷತ್ ಸಮಿತಿಯ ತೀರ್ಮಾನಕ್ಕೆ ಅನುಮೋದನೆ ನೀಡಲಾಯಿತು.

ವಿಷಯಸಂಖ್ಯೆ 05: ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಗೆ ಒಬ್ಬ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಕ್ರಮದ ಅನುಮೋದನೆ ಕುರಿತು.

<u>ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:</u>

ಶ್ರೀ ಕೆ.ಎಂ ಮಹೇಶ್ ರವರನ್ನು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಿದ ಕ್ರಮವನ್ನು ಧೃಡೀಕರಿಸಿತು.

ಅಂತಿಮವಾಗಿ ಕುಲಸಚಿವರು ಎಲ್ಲಾ ಸದಸ್ಯರ ಸಹಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿ, ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ-5/360/2021-22 ದಿನಾಂಕ: 28.03.2022.

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 16.03.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: **16.03.2022** ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/5ನೇ ಸಾಮಾನ್ಯ/360 /2021–22 ದಿನಾಂಕ: 28.03.2022

ದಿನಾಂಕ 16.03.2022 ರಂದು ಪೂರ್ವಾಹ್ನ 12.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು– 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 5ನೇ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ.ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಪ್ರೊ. ಎಂ ಚಿಕ್ಕಮುನಿಯಪ್ಪ | ಸದಸ್ಯರು |
| 3. | ಡಾ. ಶಿಂಟೆ ಆಂಟನಿ | ಸದಸ್ಯರು |
| 4. | ಶ್ರೀ. ಕೆ ಶಿವಣ್ಣ | ಸದಸ್ಯರು |
| 5. | ಡಾ. ಅನೇಸಿಯಾ | ಸದಸ್ಯರು |
| 6. | ಶ್ರೀ. ಕೆ. ಎಂ. ಮಹೇಶ್ | ಸದಸ್ಯರು |
| 7. | ಶ್ರೀ. ಎಂ ಸತೀಶ್ | ಸದಸ್ಯರು |
| 8. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 9. | ಶ್ರೀ. ಎಂ ನವೀನ್ ಕುಮಾರ್ ಸಿ. ಎಂ | ಸದಸ್ಯರು |
| 10. | ಡಾ. ವಿಜಯಾನಂದ ಎಸ್ | ಸದಸ್ಯರು |
| 11. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 12. | ಡಾ. ವಿ. ಗಾಯತ್ರಿ | ಸದಸ್ಯರು |
| 13. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 14. | ಡಾ. ಕೆ ಶಿವಶಂಕರ | ಸದಸ್ಯರು |
| 15. | ಡಾ. ವಿ.ಆರ್ ದೇವರಾಜ್ | ಸದಸ್ಯರು |
| 16. | ಡಾ. ಎನ್ ನರಸಿಂಹಮೂರ್ತಿ | ಸದಸ್ಯರು |
| 17. | ಶ್ರೀ. ಎಸ್ ಚನ್ನಕೇಶವ | ಸದಸ್ಯರು |
| 18. | ಶ್ರೀ. ಸುನೀಲ್ ಎಡ್ವರ್ಡ್ ಮೆಂಡೇಸ್ | ಸದಸ್ಯರು |
| 19. | ಶ್ರೀ ಯೋಗೇಶ್ ಎಸ್ ರಾವ್ | ಸದಸ್ಯರು |
| 20. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 21. | ಪ್ರೊ. ಬಿ. ರಮೇಶ್ (ಕುಲಸಚಿವರು ಮೌಲ್ಯಮಾಪನ) | ಸದಸ್ಯರು |
| 22. | ಶ್ರೀಮತಿ ಪಿ. ರಾಧ ವಿತ್ತಾಧಿಕಾರಿಗಳು | ಸದಸ್ಯರು |
| 23. | ಶ್ರೀ. ಸಿ. ಎನ್ ಶ್ರೀಧರ್ ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಗೆ 22 ಜನ ಸದಸ್ಯರ ಕೋರಂ ಅಗತ್ಯವಿದ್ದು ನಿಗದಿಪಡಿಸಿದ ಸಮಯದ 15 ನಿಮಿಷಗಳ ನಂತರ ಅಗತ್ಯ ಕೋರಂ ಇಲ್ಲದ ಕಾರಣ ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು. ಮಧ್ಯಾಹ್ನ 12.30 ಗಂಟೆಗೆ 23 ಜನ ಸದಸ್ಯರು ಉಪಸ್ಥಿತರಿರುವುದನ್ನು ಖಚಿತಪಡಿಸಿಕೊಂಡು ಸಭೆಯ ಕಾರ್ಯಕಲಾಪವನ್ನು ಪ್ರಾರಂಭಿಸಲಾಯಿತು. ಕುಲಸಚಿವರು ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿ ಕಲಾಪಗಳನ್ನು ಆರಂಭಿಸಲು. ಸಭಾಧ್ಯಕ್ಷರ ಅನುಮತಿ ಕೋರಿದರು. ಸನ್ಮಾನ್ಯ ಸಭಾಧ್ಯಕ್ಷರು ಮತ್ತೊಮ್ಮೆ ಎಲ್ಲ ಸದಸ್ಯರಿಗೆ ಸ್ವಾಗತ ಕೋರಿ ಹೊಸದಾಗಿ ನಾಮನಿರ್ದೇಶನ ಹೊಂದಿದ ಪ್ರಾಂಶುಪಾಲರಾದ ಡಾ. ಎಸ್ ಎನ್ ವೆಂಕಟೇಶ್, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಮತ್ತು ಡಾ. ನವೀನ್ ಕುಮಾರ್ ಸಿ. ಎಂ., ಪ್ರಾಂಶುಪಾಲರು, ಜೈನ್ ಮಹಾವಿದ್ಯಾಲಯ, ರವರಿಗೆ ಅಭಿನಂದನೆ ಸಲ್ಲಿಸಿದರು. ಕುಲಪತಿಗಳು ವಿವರಣೆ ನೀಡುತ್ತಾ, ಪ್ರಥಮ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಚರ್ಚಿಸಲು ವಿಶ್ವವಿದ್ಯಾಲಯ ಕುಲಾಧಿಪತಿಗಳಾಗಿರುವ ಘನತೆವೆತ್ತ ರಾಜ್ಯಪಾಲರು ಭೇಟಿಗೆ ಇಂದು ಸಮಯ ನಿಗದಿಯಾಗಿರುವುದರಿಂದ ಅವರನ್ನು ಭೇಟಿಯಾಗಿ ಬಂದಿರುವುದಾಗಿ ತಿಳಿಸಿದರು. ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಖ್ಯಾತ, ಬಾಹ್ಯಕಾಶ ವಿಜ್ಞಾನಿ, ISRO ಸಂಸ್ಥೆಯ ವಿಶ್ರಾಂತ ಅಧ್ಯಕ್ಷರು, NEP-2020 ಕರಡು ರಚನಾ ಸಮಿತಿ ಅಧ್ಯಕ್ಷರು ಹಾಗೂ ಪ್ರಸ್ತುತ ರಾಮನ್ ಸಂಶೋಧನಾ ಕೇಂದ್ರದ ಗೌರವ ಸಲಹೆಗಾರರಾಗಿರುವ ಪದ್ಮಭೂಷಣ ಡಾ. ಕೆ. ಕಸ್ತೂರಿರಂಗನ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಲು ಒಪ್ಪಿಗೆ ನೀಡಿದ್ದು ಘಟಿಕೋತ್ಸವ ದಿನಾಂಕ ಕುರಿತು ಕುಲಾಧಿಪತಿಗಳೊಂದಿಗೆ ಚರ್ಚಿಸಿರುವುದಾಗಿ ತಿಳಿಸಿದರು. ಹೇಡನ್‌ಬರ್ಗ್ ವಿಶ್ವವಿದ್ಯಾನಿಲಯದೊಂದಿಗೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಳ್ಳಲು ಮಾನ್ಯ ಉನ್ನತ ಶಿಕ್ಷಣ ಸಚಿವರ ಕಾರ್ಯಾಲಯದಲ್ಲಿ ನಿಗದಿಯಾಗಿರುವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿರುವುದರಿಂದ ಸಭೆಯಿಂದ ಬಿಡುವು ಪಡೆಯಬೇಕಾಗಿದೆ ಎಂದು ಹೇಳಿ ವಿಜ್ಞಾನ ನಿಕಾಯದ ಹಿರಿಯ ಡೀನರಾದ ಡಾ. ವಿ. ಆರ್. ದೇವರಾಜ್ ರವರಿಗೆ ಸಭೆಯನ್ನು ನಿರ್ವಹಿಸಲು ಕೋರುವುದಾಗಿ ತಿಳಿಸಿದರು. ಅದರಂತೆ ಹಿರಿಯ ಡೀನರಾದ ಡಾ. ವಿ. ಆರ್. ದೇವರಾಜ್ ರವರು ಸಭೆಯ ಅಧ್ಯಕ್ಷತೆ ವಹಿಸಿದರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ವಿಷಯ ಸಂಖ್ಯೆ –1 : ದಿನಾಂಕ 20.12.2021 ರಂದು ಜರುಗಿದ 4 ನೇ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಗಳ ನಡವಳಿಗಳ ಧೃಢೀಕರಣ ಮತ್ತು ಅನುಪಾಲನಾ ವರದಿ.

ನಿರ್ಣಯ:

ದಿನಾಂಕ **20.12.2021** ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡವಳಿಗಳನ್ನು ಧೃಢೀಕರಿಸಿ ಅವುಗಳ ಮೇಲೆ ಕೈಗೊಂಡ ಕ್ರಮದ ಅನುಪಾಲನಾ ವರದಿಗೆ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ 2: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಅನುಮೋದಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ರ ಆರ್ಥಿಕ ವರ್ಷದ ಲೆಕ್ಕತಖ್ತೆಗಳನ್ನು ದಿನಾಂಕ 28.02.2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ. ಅದರಂತೆ ದಿನಾಂಕ 08.03.2022 ರಂದು ಜರುಗಿದ ಸಿಂಡಿಕೇಟ್ ಸಭೆಯು ಸದರಿ ಲೆಕ್ಕತಖ್ತೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ.

2021-22 ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47 ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ವಾರ್ಷಿಕ ಲೆಕ್ಕತಖ್ತೆಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ವಿತ್ತಾಧಿಕಾರಿಗಳು ಲೆಕ್ಕಪತ್ರಗಳ ವಿವರಣೆಗಳನ್ನು ಸಭೆಗೆ ಒದಗಿಸಿದರು.

ನಿರ್ಣಯ:

**2020-21ನೇ ಸಾಲಿನ ಲೆಕ್ಕತಖ್ತೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು.**

---

ವಿಷಯ ಸಂಖ್ಯೆ 3: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022-23ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಸದರಿ ಆಯವ್ಯಯ ಅಂದಾಜಿನ ಕರಡು ಪ್ರತಿಯನ್ನು ದಿನಾಂಕ 28.02.2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸಲಾಗಿ ಸದರಿ ಸಭೆ 2022-23 ನೇ ಸಾಲಿನ ಆಯವ್ಯಯಗಳನ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ.

2022-23ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು | ರೂ. 17,098.02 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು-ವೆಚ್ಚಗಳು | ರೂ. 18,293.06 ಲಕ್ಷಗಳು |
| ಆಯವ್ಯಯದಲ್ಲಿ ಒಟ್ಟು ಕೊರತೆ ಮೊತ್ತ (Total Deficit in the Budget) | ರೂ. 1,19,5.04 ಲಕ್ಷಗಳು |

ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ ವಿಶ್ವವಿದ್ಯಾನಿಲಯದ ಮೇಲೆ ನಮೂದಿಸಿದಂತೆ ಆಯವ್ಯಯ ಅಂದಾಜು ಪತ್ರವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ದಿನಾಂಕ 08.03.2022 ರಂದು ಜರುಗಿದ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ.

ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳು ಶಿಫಾರಸ್ಸು ಮಾಡಿರುವ ವಿಶ್ವವಿದ್ಯಾನಿಲಯದ 2022-23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

2022-23ನೇ ಸಾಲಿನ ವಾರ್ಷಿಕ ಆಯವ್ಯಯ ಅಂದಾಜು ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು. ವಿತ್ತಾಧಿಕಾರಿಗಳು ಆಯವ್ಯಯ ಅಂದಾಜು ಪತ್ರದ ಅಂಕಿ ಅಂಶಗಳನ್ನು ಸಭೆಗೆ ವಿವರಿಸಿದರು. ವಿಶ್ವವಿದ್ಯಾನಿಲಯದಲ್ಲಿ ಈಗಿರುವ ಕಟ್ಟಡಗಳ ನವೀಕರಣ, ಹೊಸ ಶೈಕ್ಷಣಿಕ, ಕ್ರೀಡಾ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ ಪರೀಕ್ಷಾ ಕಟ್ಟಡದ ನವೀಕರಣ, ಹಾಗೂ ಗ್ರಂಥಾಲಯದ ಡಿಜಿಟಲೀಕರಣ, ಕಂಪ್ಯೂಟರ್ ಲ್ಯಾಬ್, ಹಾಗೂ ಹಾಲಿ ಇರುವ ವಿಭಾಗಗಳಿಗೆ ಪೂರಕ ಸೌಲಭ್ಯ ನೀಡಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಇದಲ್ಲದೆ NEP ಆಶಯದಂತೆ, ಮುಂದಿನ ವರ್ಷದಿಂದ ಹಾಲಿ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ಮಟ್ಟದ ವ್ಯಾಸಂಗ ಪ್ರಾರಂಭಿಸಲು ಅಗತ್ಯ ಹಣಕಾಸಿನ ಸೌಲಭ್ಯ ಕಲ್ಪಿಸಲಾಗಿದೆ. ಹೊಸದಾಗಿ ಪ್ರಾರಂಭಿಸಲಾದ ಪರಿಸರ ವಿಜ್ಞಾನ, ಕಂಪ್ಯೂಟರ್ ವಿಜ್ಞಾನ ಮುಂತಾದ ವಿಭಾಗಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಸಹ ಯೋಜಿಸಲಾಗಿದೆ.

ಆಯವ್ಯಯದ ಕೊರತೆಯನ್ನು ಸರಿದೂಗಿಸಲು, ಸರ್ಕಾರಕ್ಕೆ ಹೆಚ್ಚಿನ ಅನುದಾನಕ್ಕಾಗಿ ವಿನಂತಿಸಲಾಗಿದೆ. ಮುಂದಿನ ವರ್ಷ ಸಂಶೋಧನಾ ಕೇಂದ್ರಗಳ ಮಾನ್ಯತೆ ನೀಡುವುದರಿಂದ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. UGC 12(B) ಅಡಿಯಲ್ಲಿ ಮಾನ್ಯತೆ ದೊರೆತಲ್ಲಿ ಕೇಂದ್ರ ಸರ್ಕಾರದಿಂದ ಸಹ ಅನುದಾನ ಪಡೆಯಲು ಅರ್ಹತೆ ಹೊಂದುತ್ತೇವೆ. ಈ ರೀತಿ ಬರಬಹುದಾದ ಹೆಚ್ಚುವರಿ ಅನುದಾನದಿಂದ ಹಾಗೂ ಅನಗತ್ಯ ವೆಚ್ಚಗಳನ್ನು ನಿಯಂತ್ರಿಸುವ ಮುಖಾಂತರ ಆಯವ್ಯಯದ ಕೊರತೆ ಮೊತ್ತವನ್ನು ಸರಿದೂಗಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿ ರವರು ಈಗಾಗಲೇ ಅನುಮೋದನೆಗೊಂಡು ಮುಂದುವರೆಯುತ್ತಿರುವ ಕ್ಯಾಂಪಸ್ ಪುನಾರಾಭಿವೃದ್ಧಿ ಯೋಜನೆ ಕಟ್ಟಡಗಳು ಹಾಗೂ 2022-23ನೇ ಸಾಲಿನಲ್ಲಿ ಕೈಗೆತ್ತಿಗೊಳ್ಳುವ ಕಾಮಗಾರಿಗಳ ವಿವರಗಳನ್ನು ಆಯವ್ಯಯದಲ್ಲಿ ತೋರಿಸಿರುವುದಿಲ್ಲ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಈ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಕುರಿತು ಪ್ರಸ್ತಾಪಿಸಿ ಹಲವು ಸಿಬ್ಬಂದಿಯವರು ಸೇವೆಯಿಂದ ನಿವೃತ್ತರಾಗಿದ್ದು, ಅವರಿಗೆ ಸಿಗಬೇಕಾದ ನಿವೃತ್ತಿ ವೇತನ ಹಾಗೂ ಸೌಲಭ್ಯಗಳನ್ನು ನೀಡದಿರುವ ಕುರಿತು ಪ್ರಸ್ತಾಪಿಸಿ. ನಿವೃತ್ತಿ ಹೊಂದುವ ಸಿಬ್ಬಂದಿಗಳಿಗೆ ನಿಯಮಾವಳಿಗಳ ಪ್ರಕಾರ ನಿವೃತ್ತಿ ವೇತನ ಹಾಗೂ ಸೌಲಭ್ಯಗಳನ್ನು ನೀಡಬೇಕೆಂದು ಇದಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದಿಂದ GPF ಮೊತ್ತ ಸ್ವಿಕೃತಿಯಾಗಿದ್ದು ಅದನ್ನು ಸಹ ನಿವೃತ್ತಿಹೊಂದಿದ ಸಿಬ್ಬಂದಿಗಳಿಗೆ ಮರಳಿಸಬೇಕು ಎಂದು ಹೇಳಿದರು.

ಈ ಕುರಿತು ಉನ್ನತ ಶಿಕ್ಷಣ ಪರಿಷತ್ತಿನ ಹಿಂದಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಎಸ್ ಎ ಕೋರಿಯವರ ಅಧ್ಯಕ್ಷತೆಯ ಸಮಿತಿ ನೀಡಿರುವ ವರದಿಯಲ್ಲಿ, ಹುದ್ದೆಗಳ ವರ್ಗಾವಣೆಗೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ನೀಡಲಾಗಿದ್ದು. ಅದರಂತೆ ವರ್ಗಾವಣೆಗೊಂಡ ಸಿಬ್ಬಂದಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ ನೀಡಬೇಕಾದ ಎಲ್ಲ ಸೌಲಭ್ಯಗಳನ್ನು ಈ ವಿಶ್ವವಿದ್ಯಾನಿಲಯವು ನೀಡಬೇಕಾಗುತ್ತದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ / ಪಂಗಡಗಳ ವಿದ್ಯಾರ್ಥಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಆಯವ್ಯಯದ 18 ಪ್ರತಿಶತ ಮೊತ್ತವನ್ನು ವ್ಯಯಮಾಡಬೇಕಾಗುತ್ತದೆ. ಆಯವ್ಯಯದಲ್ಲಿ ಸರ್ಕಾರದ ಸೌಲಭ್ಯಗಳನ್ನು ಹೊರತುಪಡಿಸಿ ಬೇರೆ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ವಿವರಣೆ ನೀಡಿ, ಸ್ಥಿರ ಆಸ್ತಿಗಳ ಮೇಲಿನ ವೆಚ್ಚಗಳ ಅಡಿಯಲ್ಲಿ, ಮುಂದುವರೆದ ಕಾಮಗಾರಿ ಹಾಗೂ ಹೊಸ ಕಾಮಗಾರಿಗಳು ಸೇರಿದಂತೆ ಕ್ರೋಢೀಕೃತ ಅವಕಾಶ ಕಲ್ಪಿಸಲಾಗಿದೆ. ಇದು ಹಣಕಾಸು ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದೆ. ಈ ಆಯವ್ಯಯದಲ್ಲಿ 2022-23ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಹೊಸ ಕಾಮಗಾರಿ, ಪರೀಕ್ಷಾ ವಿಭಾಗದ ನವೀಕರಣ, ನಿರ್ವಹಣೆ ವೆಚ್ಚಗಳನ್ನೂ ಒಳಗೊಂಡಂತೆ ಅವಕಾಶ ಕಲ್ಪಿಸಲಾಗಿದೆ. ಪಿಂಚಣಿ ಸೌಲಭ್ಯಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ನಿವೃತ್ತ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಸೌಲಭ್ಯಗಳ ಮಂಜೂರು ಮಾಡಿದ ನಂತರ ಪಾವತಿಲಾಗುವುದು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ಸರ್ಕಾರದಿಂದ ಬರುವ ಸೌಲಭ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಇನ್ನಿತರ ಲೆಕ್ಕ ಶಿರ್ಷಿಕೆಗಳಲ್ಲಿ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಹೇಳಿದರು.

ಕುಲಸಚಿವರು ವಿವರಣೆ ನೀಡಿ, ನಿವೃತ್ತ ವೇತನ ಪಾವತಿಸುವ ಕುರಿತು ಇರುವ ವಿಧಿ ವಿಧಾನಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಸಿಬ್ಬಂದಿಯ ನಿವೃತ್ತಿ ವೇತನ ತಡೆಯುವ ಉದ್ದೇಶವಿಲ್ಲ. ತಾಂತ್ರಿಕ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಪ್ರಸ್ತುತ ಆಯವ್ಯಯದಲ್ಲಿ ಅರ್ಹ ಸೌಲಭ್ಯ ನೀಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಾದಲ್ಲಿ ಸರ್ಕಾರದಿಂದ ಮಾಹಿತಿ ಪಡೆಯಲಾಗುವದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ Laptop ನೀಡುವ ಕುರಿತು ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಇನ್ನು ಕೆಲವು ದಿನಗಳಲ್ಲಿ ಕಾರ್ಯಾದೇಶ ನೀಡಲಾಗುವುದು ಎಂದು ಹೇಳಿದರು.

ಅಂತಿಮವಾಗಿ ಸಭಾಧ್ಯಕ್ಷರು ವಿವರಣೆ ನೀಡಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಬಂದಿರುವ ಸಿಂಬ್ಬಂದಿಗಳಿಗೆ ಅನ್ವಯವಾಗುವ ನಿಯಮಗಳ ಪ್ರಕಾರ ನಿವೃತಿವೇತನ ಹಾಗೂ ಸೌಲಭ್ಯಗಳನ್ನು ಪಾವತಿಸಲು ಕ್ರಮ ವಹಿಸಲಾಗುವುದು. ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ವೀಕೃತವಾಗಿರುವ GPF ಹಣವನ್ನು ಸಂಬಂಧಿಸಿದ ಸಿಬ್ಬಂದಿಗಳಿಗೆ ಮರು ಪಾವತಿ ಮಡಲು ಕ್ರಮವಹಿಸಲಾಗುವುದು. ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲು ಪ್ರತ್ಯೇಕವಾದ ನಿಧಿ (Pension Fund) ರೂಪಿಸಲು ಕ್ರಮಕೈಗೊಲಾಗುವುದು ಎಂದು ತಿಳಿಸಿದರು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಂಡ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ವಿವಿಧ ಶೀರ್ಷಿಕೆಗಳಿಂದ ಹೆಚ್ಚುವರಿ ಮೊತ್ತವನ್ನು ಕ್ರೋಢೀಕರಿಸಿ ವಿನಿಯೋಗಿಸಲಾಗುವುದು ಎಂದು ತಿಳಿಸಿದರು.

ನಿರ್ಣಯ:

**2022-23ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ: 04: ಎಸ್.ವಿ.ಎನ್.ಕೆ ಹೊಸ ಕಾಲೇಜಿಗೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 42 ಯುಆರ್‌ಸಿ 2022, ದಿನಾಂಕ: 25.01.2022

2. ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ಶೈ.ವಿ/ಮ.ಬೇಟಿ/ಸಂಯೋಜನೆ/2021-22/04.02.2021

*ಪರಾಮರ್ಶಕ ಟಿಪ್ಪಣಿ*

ಬೆಂಗಳೂರ ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಶ್ರಿ ವಿದ್ಯಾ ಸೆಂಥಿಲ್ ಫೌಂಡೇಷನ್ ನೆಟ್‌ಕಲ್ಲಪ್ಪ ಸರ್ಕಲ್ ಹತ್ತಿರ, ಡಿ.ವಿ.ಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004 ಇವರ ಮನವಿಯನ್ನು ಸರ್ಕಾರವು ಪರಿಶೀಲಿಸಿ, ಸದರಿ ಕಾಲೇಜಿಗೆ ಮರು ಪರಿಶೀಲನೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯನ್ನು ಕಳುಹಿಸಿ ನಿಯಮಾನುಸಾರ ತಪಾಸಣೆ ಕೈಗೊಂಡು ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ, ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆರವರು ಉಲ್ಲೇಖ(1) ರ ಪತ್ರದಲ್ಲಿ ಕೋರಿರುತ್ತಾರೆ.

ಸರ್ಕಾರ ಆದೇಶದನ್ವಯ ವಿಶ್ವವಿದ್ಯಾನಿಲಯವು ಡಾ. ಆರ್ ಕೆ ಚಂದ್ರನಾಥ್ ರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿ ರಚಿಸಿದ್ದು, ಉಲ್ಲೇಖ (2)ರ ಪ್ರಕಾರ ವಿಶ್ವವಿದ್ಯಾನಿಲಯದ ಆದೇಶದಂತೆ ಮರು ಪರಿಶೀಲನೆಗಾಗಿ ಸದರಿ ಕಾಲೇಜಿಗೆ ಸಮಿತಿಯು ದಿನಾಂಕ 10.02.2022 ರಂದು ಭೇಟಿನೀಡಿ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಸ್ಥಳೀಯ ವಿಚಾರಣಾ ಸಮಿತಿಯ ವರದಿಯ ಪ್ರಕಾರ ಈ ಕೆಳಕಂಡಂತೆ ಸೂಚಿಸಲಾಗಿದೆ.

**PART : B WEIGHTED SCORE**

| Sl. No | Criteria / Index | Criteria-wise percentage | Secured Score as per LIC Data | Secured Weighted Score |
|---|---|---|---|---|
| 1 | Infrastructure Index | 70 | 89 | 47.92 |
| 2 | Faculty Index | 30 | 18 | 9.00 |
| | Total | 100 | 107 | 56.92 |

**PART : C RECOMMENDATIONS**

| Score – Combinations | | | | |
|---|---|---|---|---|
| **Sl No** | **Name of the Course and Combination** | **NCTE/AICTE Approval** | **Intake Sought** | **Recommendations** |
| 1 | Bachelor of Business Administrations- BBA | Not Applicable | 60 | Recommended to 40 Intake |
| 2 | Bachelor of Commerce – B.Com | Not Applicable | 100 | Recommended to 80 Intake |

ಮೇಲ್ಕಂಡ ಪ್ರಸ್ತಾವನೆಯನ್ನು ಎಸ್.ವಿ.ಎನ್.ಕೆ ಹೊಸ ಕಾಲೇಜಿಗೆ ಸಂಯೋಜನೆ ನೀಡುವುದರ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:

ಸ್ಥಳೀಯ ವಿಚಾರಣಾ ಸಮಿತಿ ಶಿಫಾರಸ್ಸುಗಳಿಗೆ ಅನುಮೋದನೆ ನೀಡಲಾಯಿತು.

ಸಾಮಾನ್ಯ ಚರ್ಚೆ:

1. ಸದಸ್ಯರಾದ ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ ರವರು ಹಸನತ್ ಮಹಿಳಾ ಮಹಾವಿದ್ಯಾಲಯದಲ್ಲಿ ಯು.ಜಿ.ಸಿ ಮಂಜೂರಿಸಿರುವ B.Voc Tourism & Travel Management under B.Com, ಅಸ್ತಿತ್ವದಲ್ಲಿದ್ದು ಸಂಯೋಜನೆ ಅಧಿಸೂಚನೆಯಲ್ಲಿ ಈ ಕೋರ್ಸು ಬಿಟ್ಟುಹೋಗಿದೆ. ಸ್ಥಳೀಯ ವಿಚರಣಾ ಸಮಿತಿ ಶಿಫಾರಸ್ಸು ಮಾಡಿರುತ್ತದೆ ಈ ಕುರಿತು ಕ್ರಮಕೈಕೊಳ್ಳಬೇಕೆಂದು ಪ್ರಸ್ತಾಪಿಸಿದರು.

**ಕಡತದಲ್ಲಿ ಇರುವ ವಿವರಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳವುದಾಗಿ ತಿಳಿಸಲಾಯಿತು.**

2. ಸದಸ್ಯರಾದ ಡಾ. ಎಸ್ ನರಸಿಂಹಮೂರ್ತಿರವರು ಎಂ.ಎ ಇತಿಹಾಸ 4ನೇ ಸೆಮಿಸ್ಟರ್ ವ್ಯಾಸಂಗದಲ್ಲಿ History & Computing (C) ಎಂಬ ಒಂದು ಕಡ್ಡಾಯ ವಿಷಯ ವಿದ್ದು ಇದನ್ನು ಅಂಧ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಸಾಧ್ಯವಾಗುವುದಿಲ್ಲ ಕಾರಣ ಬಾಹ್ಯ ಆಯ್ಕೆ (Open Elective) ಪತ್ರಿಕೆಯಾಗಿ ನಿಗದಿಪಡಿಸಿರುವ Indian Religion ವಿಷಯವನ್ನು ಅಂಧ ವಿದ್ಯಾರ್ಥಿಗಳು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲು ಸಭೆಯ ಅನುಮೋದನೆ ಕೋರಿದರು.

**ಈ ವಿಷಯವನ್ನು ಇತಿಹಾಸ ಸ್ನಾತಕೋತ್ತರ ಅಧ್ಯಯನ ಮಾಡಲು ಪರಿಶೀಲನೆಗೆ ಕಳುಹಿಸಲಾಗುವುದು ಎಂದು ತಿಳಿಸಲಾಯಿತು.**

3. ಸದಸ್ಯರಾದ ಡಾ. ಎಸ್ ಹರಿಪ್ರಸಾದ್ ರವರು M.Sc Plant Science ಮತ್ತು M.Sc Animal Science ಕೋರ್ಸುಗಳ ಶೀರ್ಷಿಕೆಯನ್ನು M.Sc Botany ಮತ್ತು M.Sc Zoology ಎಂದು ಬದಲಾಯಿಸುವ ಕುರಿತು ಪ್ರಸ್ತಾಪಿಸಿದರು.

**ಪ್ರಸ್ತುತ 2021–22 ನೇ ಶೈಕ್ಷಣಿಕ ಸಾಲಿನಿಂದ M.Sc Plant Science ಕೋರ್ಸನ್ನು M.Sc Botany ಎಂದು M.Sc Animal Science ಕೋರ್ಸನ್ನು M.Sc Zoology ಎಂದು ಬದಲಾಯಿಸಲಾಗುವುದೆಂದು ತಿಳಿಸಲಾಯಿತು.**

**ಹಿಂದಿನ ವರ್ಷಗಳ ವಿದ್ಯಾರ್ಥಿಗಳಿಗೆ M.Sc Plant Science - M.Sc Botany ಮತ್ತು M.Sc Animal Science - M.Sc Zoology ಕೋರ್ಸುಗಳಿಗೆ ಸಮಾನ ಎಂಬ ವಿಷಯ ಪರಿಗಣಿಸಲು ಸಮಿತಿ ರಚಿಸಲಾಗಿದ್ದು ಸಮಿತಿಯ ಶಿಫಾರಸ್ಸಿನಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಲಾಯಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಂ.ನ.ವಿ/ವಿವಿಪ/ಅಸಾಮಾನ್ಯ ಸಭೆ/243/2021-22 ದಿನಾಂಕ: 21.10.2021

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು-560 001

ಮಾನ್ಯರೆ,

ವಿಷಯ: ದಿನಾಂಕ 12.10.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

*****

ದಿನಾಂಕ 12.10.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ರಲ್ಲಿ ಜರುಗಿದ ವಿದ್ಯಾವಿಷಯ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಾಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಮೇಲೆ ಹೇಳಿದ ಪರಿನಿಯಮಾಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಲಾಗಿದೆ. ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

ಕುಲಸಚಿವರು

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು- 560 001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು- 560-001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ/ ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ/2021-22/243 ದಿನಾಂಕ: 21.10.2021

ದಿನಾಂಕ 12.10.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ. ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 3. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 4. | ಶ್ರೀ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 5. | ಡಾ: ಶಿಂಟಿ ಆಂಟನಿ | ಸದಸ್ಯರು |
| 6. | ಶ್ರೀ. ಕೆ. ಶಿವಣ್ಣ | ಸದಸ್ಯರು |
| 7. | ಡಾ: ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ: ಅನೇಸಿಯಾ | ಸದಸ್ಯರು |
| 9. | ಶ್ರೀ. ಕೆ.ಎಂ. ಮಹೇಶ್ | ಸದಸ್ಯರು |
| 10. | ಶ್ರೀ ಸತೀಶ್ ಎಂ. | ಸದಸ್ಯರು |
| 11. | ಡಾ: ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 12. | ಡಾ: ವಿಜಯಾನಂದ ಎಸ್ | ಸದಸ್ಯರು |
| 13. | ಡಾ: ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 14. | ಶ್ರೀ ಕುಮಾರ್ ಆರ್. ಎನ್ | ಸದಸ್ಯರು |
| 15. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 16. | ಡಾ: ಎಂ. ಮುನಿರಾಜು | ಸದಸ್ಯರು |
| 17. | ಡಾ: ವಿ. ಗಾಯತ್ರಿ | ಸದಸ್ಯರು |
| 18. | ಡಾ: ಎಸ್. ಹರಿಪ್ರಸಾದ್ | ಸದಸ್ಯರು |
| 19. | ಡಾ: ಶಿವಶಂಕರ | ಸದಸ್ಯರು |
| 20. | ಡಾ: ವಿ.ಆರ್. ದೇವರಾಜ್ | ಸದಸ್ಯರು |
| 21. | ಡಾ: ಎಂ. ಮುನಿನಾರಾಯಣಪ್ಪ | ಸದಸ್ಯರು |
| 22. | ಡಾ: ಎನ್. ನರಸಿಂಹಮೂರ್ತಿ | ಸದಸ್ಯರು |
| 23. | ಶ್ರೀ. ಎಂ. ಚನ್ನಕೇಶವ | ಸದಸ್ಯರು |
| 24. | ಶ್ರೀ ಎಂ. ವೆಂಕಟೇಶ್ | ಸದಸ್ಯರು |
| 25. | ಶ್ರೀ ಸುನಿಲ್ ಎಡ್ವರ್ಡ್ ಮಂಡೇಸ್ | ಸದಸ್ಯರು |

| | | |
|---|---|---|
| 26. | ಶ್ರೀ ಯೋಗೇಶ್ | ಸದಸ್ಯರು |
| 27. | ಪ್ರೊ. ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 28. | ಶ್ರೀಮತಿ ಪಿ ರಾಧಾ<br>ವಿತ್ತಾಧಿಕಾರಿಗಳು | ಸದಸ್ಯರು |
| 29. | ಶ್ರೀ ಸಿ ಎನ್ ಶ್ರೀಧರ<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಹಾಗೂ ಸಭಾಧ್ಯಕ್ಷರಾದ ಕುಲಪತಿಗಳಿಗೆ ಸ್ವಾಗತಿಸುವುದರೊಂದಿಗೆ ಸಭೆಯ ಕಾರ್ಯ ಕಲಾಪಗಳನ್ನು ಪ್ರಾರಂಭಿಸಲಾಯಿತು.

**ವಿಷಯ ಸಂಖ್ಯೆ 1: Consideration and approval of Draft Regulations Governing the Choice Based Credit System Semester with Multiple Entry and Exit Options in the Under Graduate and Post Graduate Degree Programme in the Faculties of Arts, Science and Commerce"**

ಕುಲಪತಿಗಳು ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಪ್ರಾಸ್ತಾಪಿಸಿ, 2020-21 ನೇ ವರ್ಷ ಉನ್ನತ ಶಿಕ್ಷಣದಲ್ಲಿ ಮೈಲ್ಲಿಗಲ್ಲು ಆಗಲಿದೆ ಎಂದು ಹೇಳಿ, ಈ ವರ್ಷದಲ್ಲಿ ಬಹು ನಿರೀಕ್ಷಿತ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿರುವ ರಾಜ್ಯಗಳಲ್ಲಿ ಕರ್ನಾಟಕ ಪ್ರಥಮ ರಾಜ್ಯವಾಗಿದೆ, ಇದರ ಶ್ರೇಯಸ್ಸು ರಾಜ್ಯದ ಉನ್ನತ ಶಿಕ್ಷಣ ಸಚಿವರಿಗೆ ಸಲ್ಲುತ್ತದೆ. ಅವರ ಅವಿರತ ಪ್ರಯತ್ನ ಹಾಗೂ ಮುಂದಾಳತ್ವದಿಂದಾಗಿ ಇದು ಸಾಧ್ಯವಾಗಿದೆ ಎಂದು ಹೇಳಿದರು. ಶಿಕ್ಷಣ ರಾಜ್ಯದ ಅಭಿವೃದ್ಧಿಗೆ ಹಾಗೂ ಕಲ್ಯಾಣಕ್ಕೆ ಅಡಿಪಾಯ, ಸದೃಢ ಸಮಾಜ ನಿರ್ಮಾಣಕ್ಕೆ ಹಾಗೂ ಸರ್ವತೋಮುಖಿ ಅಭಿವೃದ್ಧಿಗೆ ಸಮಗ್ರ ಶಿಕ್ಷಣ ವ್ಯವಸ್ಥೆ ಅಗತ್ಯ. ಆ ದಿಕ್ಕಿನಲ್ಲಿ ರಾಜ್ಯ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯಗಳು ಮುನ್ನಡೆದಿವೆ ಎಂದು ಹೇಳಿದರು. ಈ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ತಜ್ಞರ ಸರಣಿ ಸಭೆಗಳನ್ನು ನಡೆಸಿ, ಕರಡು ಮಾದರಿ ವಿನಿಯಮಗಳನ್ನು (Regulations) ಸಿದ್ದಪಡಿಸಿ ಎಲ್ಲ ವಿಶ್ವವಿದ್ಯಾಲಯಗಳಿಗೆ ನೀಡಿದೆ, ಈ ಕರಡು ವಿನಿಯಮಗಳನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರವಾದ ವಿದ್ಯಾವಿಷಯಕ ಪರಿಷತ್ತಿನಲ್ಲಿ ಮಂಡಿಸಿ ಅನುಮೋದನೆ ಪಡೆದು, ಸರ್ಕಾರದ ಮುಖಾಂತರ ಗೌರವಾನ್ವಿತ ಕುಲಾಧಿಪತಿಗಳಿಗೆ ಕಳುಹಿಸಿ ಅವರಿಂದ ಅನುಮೋದನೆ ಪಡೆಯಬೇಕಾಗಿದೆ. ಈ ಕರಡು ವಿನಿಯಮಗಳನ್ನು ಸಾಕಷ್ಟು ಚರ್ಚೆ ಪರಾಮರ್ಶೆಯ ನಂತರ ಹಲವಾರು ಸಲ ಪರಿಷ್ಕರಿಸಿ ಅಂತಿಮವಾಗಿ ಒಂದು ಉತ್ಕೃಷ್ಟ ಮಟ್ಟದ ವಿನಿಯಮಗಳನ್ನು ಸಿದ್ದಪಡಿಸಲಾಗಿದೆ.

ಸದರಿ ವಿನಿಯಮ ಒಟ್ಟು 23 ಉಪಬಂಧಗಳನ್ನು ಹೊಂದಿರುವುದನ್ನು ತಿಳಿಸಿ ಅವುಗಳನ್ನು ವಿವರಿಸಿದರು. ಪದವಿ ಮಟ್ಟದ ಶಿಕ್ಷಣ ಶಕ್ತಿಶಾಲಿಯಾದ 4 ವರ್ಷಗಳ ವ್ಯಾಸಂಗವಾಗಲಿದೆ ಏಕಶಿಸ್ತೀಯ ವ್ಯಾಸಂಗ ಕ್ರಮದಿಂದ ಬಹುಶಿಸ್ತೀಯ ವ್ಯಾಸಂಗ ಕ್ರಮದ ವ್ಯವಸ್ಥೆ ಜಾರಿಯಲ್ಲಿ ಬರಲಿದೆ. ವಿಷಯಗಳ ಆಯ್ಕೆಯ ಸ್ವಾತಂತ್ರ್ಯ ಹಾಗೂ ಪ್ರತಿ ಹಂತದಲ್ಲಿ ಅಧ್ಯಯನ ಸಲ್ಲಿಸಿ ಕೆಲ ಅವಧಿಯ ನಂತರ ಪುನಃ ಶಿಕ್ಷಣ ಮುಂದುವರೆಸುವ ಅವಕಾಶ ವಿದ್ಯಾರ್ಥಿಗಳಿಗೆ ಸಿಗಲಿದೆ ಎಂದು ಹೇಳಿದರು. ಶಿಕ್ಷಣದಲ್ಲಿ ಕೌಶಲ್ಯ ಅಭಿವೃದ್ಧಿ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಒತ್ತು ಕೊಡುವ ಕಲಿಕೆ ಇದಾಗಲಿದೆ ಎಂದು ಹೇಳಿದರು.

ಕರಡು ವಿನಿಯಮಗಳ ರಚನಾ ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸಮಿತಿಗಳಲ್ಲಿ ಸಹ ಇದು ಚರ್ಚೆಯಾಗಿದೆ.

ಉನ್ನತ ಶಿಕ್ಷಣ ಪರಿಷತ್ತು ಹೊರಡಿಸಿದ ಇತ್ತೀಚಿನ ತಿದ್ದುಪಡಿಗಳನ್ನು ದಿನಾಂಕ 4.9.2021 ರಂದು ವಿಶ್ವವಿದ್ಯಾನಿಲಯಕ್ಕೆ ತಲುಪಿದ್ದು, ಒಂದು ವಾರದ ಅವಧಿಯಲ್ಲಿ, ಈ ವಿನಿಯಮಗಳನ್ನು ಪುಸ್ತಕ ರೂಪದಲ್ಲಿ ಸಿದ್ಧಗೊಳಿಸಿ ಈ ಸಭೆಯ ಮುಂದೆ ತರಲಾಗಿದೆ. ಅದರಂತೆ ಏಕರೂಪದ ಮಾದರಿಯಾಗಿ ಆಂತರಿಕ ಮೌಲ್ಯಮಾಪನ ಮತ್ತು ಸೆಮೆಸ್ಟರ್ ಅಂತ್ಯದ ಥೇರಿ ಪರೀಕ್ಷೆಯ ಅಂಕಗಳನ್ನು 40:60 ಮತ್ತು ಶೇಕಡಾ 50:50 ಅಂಕಗಳನ್ನು ಪ್ರಾಯೋಗಿಕ ಪರೀಕ್ಷೆಗಳಿಗೆ ನಿಗದಿ ಪಡಿಸಲಾಗಿದೆ ಎಂದು ತಿಳಿಸಿ ಸಭೆಯ ಅನುಮೋದನೆ ಕೋರಿದರು.

ಕೆಲವು ಸದಸ್ಯರು ಆಂತರಿಕ ಅಂಕಗಳನ್ನು ಹೆಚ್ಚಿಗೆ ಮಾಡಿರುವ ಕುರಿತು ಅಭಿಪ್ರಾಯ ವ್ಯಕ್ತಪಡಿಸಿ ಹಿಂದೆ ಇದ್ದ 30:70 ರ ಪ್ರಮಾಣ ಸರಿಯಾಗಿತ್ತು ಎಂದು ಹೇಳಿ ಆಂತರಿಕ ಅಂಕಗಳನ್ನು ನೀಡುವಲ್ಲಿ ಆಗುತ್ತಿರುವ ದೋಷಗಳನ್ನು ವಿಶ್ಲೇಷಿಸಿದರು. ಕುಲಪತಿಗಳು ಸಮಾಧಾನ ನೀಡಿ ಮುಂಬರುವ 10-15 ವರ್ಷಗಳಲ್ಲಿ ಬಹುಪಾಲು ಕಾಲೇಜುಗಳು ಸ್ವಯಂ ಪದವಿ ಪ್ರಧಾನ ಮಾಡುವ ಶಿಕ್ಷಣ ಸಂಸ್ಥೆಗಳಾಗಲಿವೆ. ಮಹಾವಿದ್ಯಾಲಯಗಳಿಗ ಸಂಯೋಜನೆ ನೀಡುವ ಪರಿಕಲ್ಪನೆ ಇರುವುದಿಲ್ಲ ಹಾಗಾಗಿ ಸದಸ್ಯರ ನಿಯಮಗಳ ಜಾರಿಗೊಳಿಸುವಲ್ಲಿ ಆಗುತ್ತಿರುವ ಲೋಪದೋಷಗಳನ್ನು ಹೇಳುತ್ತಿದ್ದಾರೆ. ಆದರೆ, ವಿನಿಯಮದಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾಗಿ ಹಲವಾರು ನೈಪುಣ್ಯಾತ್ಮಕ, ಕ್ರಿಯಾತ್ಮಕ, ಪ್ರಾಯೋಗಿಕ, ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ. ಅವುಗಳ ಅನುಸಾರವಾಗಿ ಅಂಕಗಳನ್ನು ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಕುಲಸಚಿವರು(ಮೌಲ್ಯಮಾಪನ) ರವರು ಚರ್ಚೆಯಲ್ಲಿ ಭಾಗವಹಿಸಿ, ಪ್ರಸ್ತುತ ಶಿಕ್ಷಣ ನೀತಿ ವಿದ್ಯಾರ್ಥಿ ಮತ್ತು ಶಿಕ್ಷಕರ ಕೇಂದ್ರಿತ ಶಿಕ್ಷಣ ನೀಡುವ ವ್ಯವಸ್ಥೆಯಾಗಿದೆ. ಆಂತರಿಕ ಮೌಲ್ಯಮಾಪನದ ವಿಸ್ತಾರ ಹಾಗೂ ವ್ಯಾಪ್ತಿ ಹೆಚ್ಚಿಸಲಾಗಿದೆ, ಅದರಂತೆ ಅಂಕಗಳನ್ನು ನಿಗದಿಪಡಿಸಲಾಗಿದೆ. ಮಹಾವಿದ್ಯಾಲಯಗಳು ನೀಡುವ ಆಂತರಿಕ ಅಂಕಗಳ ಕುರಿತಂತೆ ಮಾನದಂಡಗಳು ಹಾಗೂ ಅಂಕಗಳನ್ನು ನೀಡಲು ಅವಲಂಬಿಸಲಾದ ದಾಖಲೆಗಳ ಕುರಿತಂತೆ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿ ಅದರ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಒಂದು ಸಮಿತಿಯನ್ನು ನೇಮಕ ಮಾಡುವ ವ್ಯವಸ್ಥೆ ಜಾರಿಯಲ್ಲಿ ತರುವುದನ್ನು ಪರಿಶೀಲಿಸಬೇಕೆಂದು ಹೇಳಿದರು.

ಹಲವಾರು ಸದಸ್ಯರು ಇದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವ ಏಕರೂಪದ ವಿನಿಯಮವಾಗಿರುವುದರಿಂದ ಹಾಗೂ ಆಂತರಿಕ ಅಂಕಗಳ ಪರಿವ್ಯಾಪ್ತಿ ವಿಸ್ತಾರವಾಗಿರುವುದರಿಂದ ಸದರಿ ವಿನಿಯಮಗಳನ್ನು ಅನುಮೋದಿಸಬಹುದೆಂದು ತಿಳಿಸಿದರು. ಆದರೆ ಅಂತಿಮವಾಗಿ ವಿನಿಯಮದ ಉಪಬಂಧ 15 ರಲ್ಲಿ ತೇರ್ಗಡೆಯಾಗಲು ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಸೆಮೆಸ್ಟರ್ ಅಂತ್ಯದ ಲಿಖಿತ ಪರೀಕ್ಷೆಗೆ ಕಡ್ಡಾಯಗೊಳಿಸಬೇಕೆಂದು ಸಲಹೆ ನೀಡಿದರು.

ನಿರ್ಣಯ:

**ಚರ್ಚೆಯ ನಂತರ** Draft Regulations Governing the Choice Based Credit System Semester with Multiple Entry and Exit Options in the Under Graduate and Post Graduate Degree Programme in the Faculties of Arts, Science and Commerce" **ವಿನಿಯಮಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.**

ಉಪಬಂಧ 15(a) ನಲ್ಲಿರುವ ತೇರ್ಗಡೆಗಾಗಿ ನಿಗದಿ ಪಡಿಸಿದ 35% ಕನಿಷ್ಠ ಅಂಕಗಳನ್ನು ಸೆಮಿಸ್ಟರ್ ಅಂತ್ಯದಲ್ಲಿ ಲಿಖಿತ ಪರೀಕ್ಷೆಗಳಲ್ಲಿ ಕಡ್ಡಾಯಗೊಳಿಸಿ ಸೂಕ್ತ ತಿದ್ದುಪಡಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ 2: **Consideration and approval of the new Syllabus recommended by the Boards of Studies in the Faculty of Arts as per NEP-2020 guidelines-reg.**

ಕುಲಪತಿಗಳು ಅಧ್ಯಯನ ಮಂಡಳಿಗಳನ್ನು ರಚಿಸಿದ ನಂತರ ಕೈಗೊಂಡ ಕ್ರಮಗಳ ಕುರಿತು ವಿಸ್ತಾರವಾಗಿ ಸಭೆಗೆ ವಿವರಿಸಿದರು ಕೆಲವು ಅಧ್ಯಯನ ಮಂಡಳಿಗಳ ಪಠ್ಯಕ್ರಮಗಳನ್ನು ಸಿದ್ಧಪಡಿಸಿದ ನಂತರ, 40:60 ಅನುಪಾತದ ಅಂಕ ನಿಗದಿಕರಣದ ಸೂಚನೆ ಬಂದ ಕಾರಣ ಪುನ: ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಪತ್ರ ಬರೆದು, ಪಠ್ಯಕ್ರಮಗಳಲ್ಲಿ ಸೂಕ್ತ ಮಾರ್ಪಾಡು ಮಾಡುವಂತೆ ತಿಳಿಸಲಾಗಿದೆ. ಅದರಂತೆ ಕೆಲವು ಅಧ್ಯಯನ ಮಂಡಳಿಗಳು ಅಗತ್ಯ ಬದಲಾವಣೆಗಳನ್ನು ಮಾಡಿ, ಪಠ್ಯಕ್ರಮಗಳನ್ನು ಸಲ್ಲಿಸಿದ್ದಾರೆ. ಇನ್ನು ಕೆಲವು ಅಧ್ಯಯನ ಮಂಡಳಿಗಳು ಹಿಂದಿನ 70:30 ಅಂಕಗಳ ಪ್ರಮಾಣದಲ್ಲಿಯೇ Scheme of Examination ಮತ್ತು ಮಾದರಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ ಸಲ್ಲಿಸಿದ್ದಾರೆ. ಅವುಗಳನ್ನು ಸರಿಪಡಿಸಿ ಸಲ್ಲಿಸುವಂತೆ ವಿನಂತಿಸಲಾಗುವುದು, ಪ್ರಸ್ತುತ ಯಾವ ಯಾವ ಪಠ್ಯಕ್ರಮಗಳಲ್ಲಿ 70:30 ಎಂದು ನಮೂದಿಸಲಾಗಿರುವುದನ್ನು 60:40 ಎಂದು ಮತ್ತು ಪ್ರಾಯೋಗಿಕ ಪರೀಕ್ಷೆಗಳಲ್ಲಿ ಶೇಕಡಾ 50:50 ಎಂದು ತಿದ್ದುಪಡಿಮಾಡಿ ಪಠ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲು ಸಭೆಯ ಅನುಮೋದನೆ ಕೋರಿದರು. ಕಲಾ ನಿಕಾಯದ ಪತ್ರಿಕೋದ್ಯಮ ಹಾಗೂ ಸಂವಹನ ವಿಷಯವನ್ನು ಹೊರತು ಪಡಿಸಿ ಉಳಿದ ಪಠ್ಯಕ್ರಮಗಳು ಸಿದ್ಧವಾಗಿದ್ದು, ಅವುಗಳನ್ನು ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ ಎಂದು ತಿಳಿಸಿ ಸಭೆಯಲ್ಲಿ ಉಪಸ್ಥಿರಿದ್ದ ಪತ್ರಿಕೋದ್ಯಮ ಸಂವಹನ ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಪಠ್ಯಕ್ರಮವನ್ನು ಬೇಗ ಸಿದ್ಧಪಡಿಸಿ ಸಲ್ಲಿಸಬೇಕೆಂದು ತಿಳಿಸದರು.

ಸದಸ್ಯರು ಕೇಳಿದ ಕೆಲವು ವಿಷಯಗಳ ಕುರಿತು ವಿವರಣೆ ಒದಗಿಸಲಾಯಿತು. ಈಗ ಮಂಡಿಸಿರುವ ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ವಾಸ್ತವಾಂಶಗಳ ಆಧಾರದ ಮೇಲೆ ಅಗತ್ಯ ಬದಲಾವಣೆಗಳನ್ನು ಮಾಡಲು ಹಾಗೂ ಕೆಲವು ವಿಷಯಗಳ ಪಠ್ಯಕ್ರಮಗಳನ್ನು ಇನ್ನೂ ಸಲ್ಲಿಸದಿರುವುದರಿಂದ ಅವುಗಳನ್ನು ಪಡೆದು, ಜಾರಿಗೊಳಸಲು ಕುಲಪತಿಗಳಿಗೆ ಅಧಿಕಾರ ನೀಡಬಹುದೆಂದು ತಿಳಿಸಿದರು.

ನಿರ್ಣಯ:

ಚರ್ಚೆಯ ನಂತರ ಕಲಾ ನಿಕಾಯದ ಕೆಳಗೆ ನಮೂದಿಸಿದ ಸ್ನಾತಕ ವಿಷಯಗಳ ಪಠ್ಯಕ್ರಮಗಳಿಗೆ ಸಭೆ ಸರ್ವಾನುಮತದ ಅನುಮೋದನೆ ನೀಡಿತು.

| Sl. No | Board of Studies | Syllabus for CBCS Semester Scheme with multiple Entry and Exit Options for UG Courses |
|---|---|---|
| 1. | BoS in Kannada | Syllabus for Kannada - I & II Semester |
| 2. | BoS in Hindi | Syllabus for Hindi - I & II Semester |
| 3. | BoS in Sanskrit | Syllabus for Sanskrit - I, II, III & IV Semester |
| 4. | BoS in Telugu | Telugu Syllabus for UG Courses |
| 5. | BoS in Urdu | I & II Sem. Syllabus for Urdu, Persian & Arabic Languages |
| 6. | BoS in Tamil & Malayalam | I & II Semester Syllabus for Tamil & Malayalam |
| 7. | BoS in Foreign Languages | Syllabus for Foreign Languages |

| | | |
|---|---|---|
| 8. | BoS in English | Syllabus for English – I & II Semester |
| 9. | BoS in Economics | Syllabus for Economics(Basic/Hons)- I & II Semester |
| 10. | BoS in Sociology | Syllabus for Sociology(Basic/Hons)- I & II Semester |
| 11. | BoS in Socialwork | Syllabus for Socialwork(Basic/Hones)- I & II Semester |
| 12. | BoS in Political Sci., | Syllabus for Political Science – I & II Semester |
| 13. | BoS in Performing Arts | Syllabus for Performing Arts – I & II Semester |
| 14. | BoS in Visual Arts | Syllabus for Visual Art - I & II Semester |
| 15. | BoS in Women Studies | Syllabus for Women Studies – I & II Semester |

ಎಲ್ಲ ಪಠ್ಯಕ್ರಮಗಳ ಆಂತರಿಕ ಅಂಕಗಳು ಮತ್ತು ಸೆಮೆಸ್ಟರ್ ಅಂತ್ಯದ ಪರೀಕ್ಷೆಗಳಿಗೆ ಕರಡು ವಿನಿಯಮಗಳ ಪ್ರಕಾರ ಏಕರೂಪದ ಮಾದರಿಯಾಗಿ **40:60** ಅಂಕಗಳನ್ನು ಮತ್ತು ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ, ಶೇಕಡಾ **50:50** ಅಂಕಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಿ, ಅದರಂತೆ ಎಲ್ಲ ಪಠ್ಯಕ್ರಮಗಳಿಗೆ ಸೂಕ್ತ ಬದಲಾವಣೆ ಮಾಡಬೇಕೆಂದು ಸಭೆ ಸೂಚಿಸಿತು.

ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮತ್ತು ಬಾಕಿರುವ ವಿಷಯಗಳ ಪಠ್ಯಕ್ರಮಗಳನ್ನು ಜಾರಿಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ವಿಷಯ ಸಂಖ್ಯೆ 3: **Consideration and approval of the new Syllabus recommended by the Boards of Studies in the Faculty of Science as per NEP-2020 guidelines-reg.**

ನಿರ್ಣಯ:

ಚರ್ಚೆಯ ನಂತರ ವಿಜ್ಞಾನ ನಿಕಾಯದ ಕೆಳಗೆ ನಮೂದಿಸಿದ ಸ್ನಾತಕ ವಿಷಯಗಳ ಪಠ್ಯಕ್ರಮಗಳಿಗೆ ಸಭೆ ಸರ್ವಾನುಮತದ ಅನಮೋದನೆ ನೀಡಿತು.

| Sl. No | Board of Studies | Syllabus for CBCS Semester Scheme with multiple Entry and Exit Options for UG Courses |
|---|---|---|
| 1. | BoS in Physics | Syllabus for Physics - I & II Semester |
| 2. | BoS in Chemistry | Syllabus for B.Sc/B.Sc(Honors)Chemistry - I & II Semester |
| 3. | BoS in Biochemistry | Syllabus for Biochemistry – I & II Semester |
| 4. | BoS in Botany | Syllabus for Botany - I & II Semester |
| 5. | BoS in Mathematics | Syllabus for Mathematics - I & II Semester |
| 6. | BoS in Statistics | Syllabus for Statiscs - I & II Semester |
| 7. | BoS in Electronic Science | Syllabus for Electronic Science(Basic/Honrs) – I & II Semester |
| 8. | BoS in Computer Science & Applications | Syllabus for B.Sc., Computer Science - I & II Semester<br>Syllabus for B.CA Computer Science - I & II Semester |
| 9. | BoS in Home Science | Syllabus for Home Science - I & II Semester |
| 10. | BoS in Environmental Sci., | Syllabus for Environmental Science - I & II Semester |
| 11. | BoS in Fashion & Apparel Design | Syllabus for BSc(Fashion & Apparel Design) - I & II Semester<br>Syllabus for BSc(Interior Design & Decoration)-I & II Sem. |

| | | |
|---|---|---|
| 12. | BoS in Geography | Syllabus for BA/BSc Geography(Basic /Honors) - I & II Semester |
| 13. | BoS in Microbiology & Biotechnology | Syllabus forBSc(Microbiology) - I & II Semester<br>Syllabus for BSc(Biotechnology) – I & II Semester |

ಎಲ್ಲ ಪಠ್ಯಕ್ರಮಗಳ ಆಂತರಿಕ ಅಂಕಗಳು ಮತ್ತು ಸೆಮಿಸ್ಟರ್ ಅಂತ್ಯದ ಪರೀಕ್ಷೆಗಳಿಗೆ ಕರಡು ವಿನಿಯಮಗಳ ಪ್ರಕಾರ ಏಕರೂಪದ ಮಾದರಿಯಾಗಿ 40:60 ಅಂಕಗಳನ್ನು ಮತ್ತು ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ, ಶೇಕಡಾ 50:50 ಅಂಕಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಿ, ಅದರಂತೆ ಎಲ್ಲ ಪಠ್ಯಕ್ರಮಗಳಿಗೆ ಸೂಕ್ತ ಬದಲಾವಣೆ ಮಾಡಬೇಕೆಂದು ಸಭೆ ಸೂಚಿಸಿತು.

ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮತ್ತು ಬಾಕಿರುವ ವಿಷಯಗಳ ಪಠ್ಯಕ್ರಮಗಳನ್ನು ಜಾರಿಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ 4: Consideration and approval of the new Syllabus recommended by the Boards of Studies in Education -reg.**

ನಿರ್ಣಯ:

ಎಲ್ಲ ಪಠ್ಯಕ್ರಮಗಳ ಆಂತರಿಕ ಅಂಕಗಳು ಮತ್ತು ಸೆಮಿಸ್ಟರ್ ಅಂತ್ಯದ ಪರೀಕ್ಷೆಗಳಿಗೆ ಕರಡು ವಿನಿಯಮಗಳ ಪ್ರಕಾರ ಏಕರೂಪದ ಮಾದರಿಯಾಗಿ 40:60 ಅಂಕಗಳನ್ನು ಮತ್ತು ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ, ಶೇಕಡಾ 50:50 ಅಂಕಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಿ, ಅದರಂತೆ ಎಲ್ಲ ಪಠ್ಯಕ್ರಮಗಳಿಗೆ ಸೂಕ್ತ ಬದಲಾವಣೆ ಮಾಡಬೇಕೆಂದು ಸಭೆ ಸೂಚಿಸಿತು.

ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ 5: Recommendation of new Syllabus for Botany (CBCS Pattern) – III to VI Semester Scheme by the BoS in Botany (UG)**

ನಿರ್ಣಯ:

ಬಿ.ಎಸ್ಸಿ III ರಿಂದ VI ಸೆಮಿಸ್ಟರ್ ಸಸ್ಯಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ಸಿದ್ಧಪಡಿಸಿದ ಪಠ್ಯಕ್ರಮವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ 6: Recommendation of new Syllabus for Statistics (CBCS Pattern) – III to VI Semester Scheme by the BoS in Statistics (UG)**

ನಿರ್ಣಯ:

ಬಿ.ಎಸ್ಸಿ III ರಿಂದ VI ಸೆಮಿಸ್ಟರ್ ಸಂಖ್ಯಾಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ಸಿದ್ಧಪಡಿಸಿದ ಪಠ್ಯಕ್ರಮವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸಂಖ್ಯೆ 7: ಸಸ್ಯ ವಿಜ್ಞಾನ ಮತ್ತು ಪ್ರಾಣಿ ವಿಜ್ಞಾನ ಸ್ನಾತಕೋತ್ತರ ವ್ಯಾಸಂಗಗಳ ಹೆಸರುಗಳನ್ನು ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಎಂದು ಮರುನಾಮಕರಣ ಮಾಡುವ ಬಗ್ಗೆ

ಎಂ.ಎಸ್ಸಿ. ಸಸ್ಯ ವಿಜ್ಞಾನ ಮತ್ತು ಎಂ.ಎಸ್ಸಿ. ಪ್ರಾಣಿ ವಿಜ್ಞಾನ ಕೋರ್ಸುಗಳ ಹೆಸರುಗಳನ್ನು ವಿದ್ಯಾರ್ಥಿಗಳ ನೇಮಕಾತಿ ಸಂದರ್ಭದಲ್ಲಿ ಕೆ.ಪಿ.ಎಸ್.ಸಿ ಮುಂತಾದ ಸಂಸ್ಥೆಗಳು ಇವರುಗಳನ್ನು ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳಿಗೆ ಸಮನಾಗಿ ಪರಿಗಣಿಸದೆ ಇರುವ ಸಾಧ್ಯತೆಯನ್ನು ವಿಜ್ಞಾನ ನಿಕಾಯದ ಡೀನರು ಸಭೆಗೆ ವಿವರಿಸಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಸ್ತಾವನೆ ಅನುಮೋದಿಸಬೇಕೆಂದು ಕೋರಿದರು.

ನಿರ್ಣಯ:

ಎಂ.ಎಸ್ಸಿ. ಸಸ್ಯವಿಜ್ಞಾನ ಮತ್ತು ಎಂ.ಎಸ್ಸಿ. ಪ್ರಾಣಿ ವಿಜ್ಞಾನ ಕೋರ್ಸುಗಳ ಹೆಸರುಗಳನ್ನು ಎಂ.ಎಸ್ಸಿ. ಸಸ್ಯಶಾಸ್ತ್ರ ಮತ್ತು ಎಂ.ಎಸ್ಸಿ. ಪ್ರಾಣಿಶಾಸ್ತ್ರ ಎಂದು ಬದಲಾಯಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

ವಿಷಯ ಸಂಖ್ಯೆ 8: **Consideration and approval of the new Syllabus recommended by the Board of Studies as per NEP -2020 guidelines-reg**

ನಿರ್ಣಯ:

ಚರ್ಚೆಯ ನಂತರ ಕೆಳಗೆ ನಮೂದಿಸಿದ ಸ್ನಾತಕ ವಿಷಯಗಳ ಪಠ್ಯಕ್ರಮಗಳಿಗೆ ಸಭೆ ಸರ್ವಾನುಮತದ ಅನಮೋದನೆ ನೀಡಿತು.

| Sl. No | Board of Studies | Syllabus for CBCS Semester Scheme with multiple Entry and Exit Options for UG Courses |
|---|---|---|
| 1. | BoS in History | Syllabus for History - I & II Semester |
| 2. | BoS in Psychology | Syllabus for Psychology - I & II Semester |
| 3. | BoS in Zoology & Genetics | Syllabus for Zoology - I & II Semester<br>Syllabus for Genetics - I & II Semester |
| 4. | BoS in Physical Education | Syllabus for Physical Education - I & II Semester |

ಎಲ್ಲ ಪಠ್ಯಕ್ರಮಗಳ ಆಂತರಿಕ ಅಂಕಗಳು ಮತ್ತು ಸೆಮಿಸ್ಟರ್ ಅಂತ್ಯದ ಪರೀಕ್ಷೆಗಳಿಗೆ ಕರಡು ವಿನಿಯಮಗಳ ಪ್ರಕಾರ ಏಕರೂಪದ ಮಾದರಿಯಾಗಿ 40:60 ಅಂಕಗಳನ್ನು ಮತ್ತು ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ, ಶೇಕಡಾ 50:50 ಅಂಕಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಿ, ಅದರಂತೆ ಎಲ್ಲ ಪಠ್ಯಕ್ರಮಗಳಿಗೆ ಸೂಕ್ತ ಬದಲಾವಣೆ ಮಾಡಬೇಕೆಂದು ಸಭೆ ಸೂಚಿಸಿತು.

ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ 9: Consideration and approval of the new Syllabus recommended by the Board of Studies in the Faculty of Commerce as per NEP- 2020**

ವಾಣಿಜ್ಯ ನಿಕಾಯದ ಡೀನರು ಹಾಗೂ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ. ಎಂ ಮುನಿನಾರಾಯಣಪ್ಪನವರು ಅಧ್ಯಯನ ಮಂಡಳಿ ಸಿದ್ದಪಡಿಸಿದ 17 ವ್ಯಾಸಂಗಗಳ ಪಠ್ಯಕ್ರಮಗಳನ್ನು ಸಭೆಯಲ್ಲಿ ಮಂಡಿಸಿದರು. ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು ಬಿಡುಗಡೆ ಮಾಡಿರುವ ಮಾದರಿ ವ್ಯಾಸಂಗ ಕ್ರಮಗಳ ಪ್ರಕಾರ, ವಿಷಯ ಪರಿಣಿತರೊಂದಿಗೆ ಹಲವಾರು ಸಲ ಚರ್ಚಿಸಿ ಪಠ್ಯಕ್ರಮಗಳನ್ನು ಸಿದ್ದಪಡಿಸಲಾಗಿದ್ದು, ಮಾನ್ಯ ಸದಸ್ಯರು ನೀಡುವ ಸಲಹೆ ಸೂಚನೆಗಳನ್ನು ಮುಕ್ತವಾಗಿ ಸ್ವೀಕರಿಸಿ, ಅಧ್ಯಯನ ಮಂಡಳಿಯ ಗಮನಕ್ಕೆ ತರಲಾಗುವುದು ಎಂದು ಹೇಳಿದರು. ಪ್ರಥಮ ಹಾಗೂ ದ್ವಿತೀಯ ಸೆಮೆಸ್ಟರ್ ವ್ಯಾಸಂಗದ ಪಠ್ಯಕ್ರಮಗಳನ್ನು ಸದ್ಯಕ್ಕೆ ಸಿದ್ದಪಡಿಸಲಾಗಿದ್ದು, ಇವುಗಳನ್ನು ಜಾರಿಗೆ ತಂದು ನಂತರ ಅನುಭವಗಳನ್ನು ಆಧರಿಸಿ ಮುಂದಿನ ಸೆಮೆಸ್ಟರ್ ಪಠ್ಯಕ್ರಮ ಸಿದ್ದಪಡಿಸಲಾಗುವುದು ಎಂದು ಹೇಳಿದರು.

ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಬಿ.ಕಾಮ್ ಅಧ್ಯಯನ ಮಂಡಳಿಯವರು ಕಳೆದ ವರ್ಷ ಜಾರಿಗೊಳಿಸಲಾದ ವ್ಯಾಸಂಗಗಳನ್ನು ಹೊರತುಪಡಿಸಿ ಹೆಚ್ಚಿನ ವ್ಯಾಸಂಗಗಳಿಗೆ ಪಠ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಸ್ತಾಪಿಸಿದ್ದಾರೆ. ಅದರಲ್ಲಿ B.Com Computer Application ವಿಷಯ ಈಗಾಗಲೇ BCA ರೂಪದಲ್ಲಿ ಅಸ್ತಿತ್ವದಲ್ಲಿ ಇರುವುದರಿಂದ ಇದರ ಅಗತ್ಯ ಕುರಿತು ಸಭೆ ಪರಿಶೀಲಿಸಬೇಕೆಂದು ಹೇಳಿದರು. ಅದಲ್ಲದೆ NEP ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಕೋರ್ಸುಗಳನ್ನು ಮಾತ್ರ ಸಧ್ಯಕ್ಕೆ ಜಾರಿಯಲ್ಲಿ ತರಬೇಕೆಂದು ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಕುಲಪತಿಗಳು ಸ್ಪಷ್ಟತೆ ನೀಡಿ, ಸರ್ಕಾರ NEP ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಈ ವರ್ಷ ಚಾಲ್ತಿಯಲ್ಲಿರುವ ಕೋರ್ಸುಗಳನ್ನು ಮಾತ್ರ ಪರಿಗಣಿಸಬೇಕೆಂದು ಸೂಚಿಸಿದೆ. ಕಾರಣ, ಕಳೆದ ವರ್ಷದಿಂದ ಚಾಲ್ತಿಯಲ್ಲಿರುವ ಕೋರ್ಸುಗಳ ಪಠ್ಯಕ್ರಮಗಳನ್ನು ಮಾತ್ರ ಸಭೆ ಪರಿಗಣಿಸುತ್ತದೆ ಎಂದು ಹೇಳಿದರು.

ನಿರ್ಣಯ:

ವಾಣಿಜ್ಯ ಅಧ್ಯಯನ ಮಂಡಳಿಯ ಶಿಫಾರಸ್ಸು ಮಾಡಿದ 17 ಪಠ್ಯಕ್ರಮಗಳಲ್ಲಿ ಕೆಳಗೆ ನಮೂದಿಸಿದ ಪಠ್ಯಕ್ರಮಗಳನ್ನು 2021–22ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ವಿದ್ಯಾ ವಿಷಯಕ ಪರಿಷತ್ ಸಭೆ ಅನುಮೋದನೆ ನೀಡಿತು.

1. **B.Com Regular**
2. **B.Com (Logistics and Supply Chain Management)**
3. **B.Com ( Accounting & Finance)**
4. **B.Com (Travel & Tourism Management )**
5. **B.Com (Insurance and Actuarial Science)**
6. **B.Com (Business Data Analytics)**
7. **BBA ( Regular)**
8. **BBA ( Aviation Management)**
9. **B. Voc ( Retail Management)**
10. **B. Voc (Accounting and Taxation)**
11. **B.H.M**

ಎಲ್ಲ ಪಠ್ಯಕ್ರಮಗಳ ಆಂತರಿಕ ಅಂಕಗಳು ಮತ್ತು ಸೆಮಿಸ್ಟರ್ ಅಂತ್ಯದ ಪರೀಕ್ಷೆಗಳಿಗೆ ಕರಡು ವಿನಿಯಮಗಳ ಪ್ರಕಾರ ಏಕರೂಪದ ಮಾದರಿಯಾಗಿ 40:60 ಅಂಕಗಳನ್ನು ಮತ್ತು ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ, ಶೇಕಡಾ 50:50 ಅಂಕಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಿ, ಅದರಂತೆ ಎಲ್ಲ ಪಠ್ಯಕ್ರಮಗಳಿಗೆ ಸೂಕ್ತ ಬದಲಾವಣೆ ಮಾಡಬೇಕೆಂದು ಸಭೆ ಸೂಚಿಸಿತು.

ಪಠ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಾಗ ಎದುರಿಸುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಇತರೆ ವಿಷಯಗಳು:

1. ಸಭೆಯ ಅಂತ್ಯದಲ್ಲಿ, ಕುಲಪತಿಗಳು ನಾಳೆ ಅಂದರೆ ದಿನಾಂಕ 13.10.2021 ರಂದು ಬುಧವಾರ ಸಂಯೋಜಿತ ಕಾಲೇಜುಗಳ ಅಧ್ಯಾಪಕರುಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಂತೆ ಮಾಹಿತಿ ನೀಡಲು ಒಂದು ದಿವಸದ ಪುನರ್ ಮನನ ಕಾರ್ಯಕ್ರಮ Orientation Programme ಆಯೋಜಿಸಿದ್ದು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 5 ವಿಧಾನ ಸಭಾ ಕ್ಷೇತ್ರಗಳ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳನ್ನು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

2. ಸದಸ್ಯರಾ ಡಾ. ವಿ. ಆರ್ ದೇವರಾಜು ರವರು ಡೀನರು ವಿಜ್ಞಾನ ನಿಕಾಯ, ಕಳೆದ ವರ್ಷ ನಗರದ ಸೆಂಟ್ ಆನ್ಸ್ ಕಾಲೇಜಿಗೆ ಎಂ.ಎಸ್ಸಿ ನ್ಯೂಟ್ರೀಶನ್ ಮತ್ತು ಡಾಯಟಿಟಿಕ್ಸ್ ವ್ಯಾಸಂಗಕ್ಕೆ ಸಂಯೋಜನೆ ನೀಡಲಾಗಿದೆ. ಇದು ಹೊಸ ಕೋರ್ಸು ಆಗಿದ್ದು. ಇದರ ಅಳವಡಿಕೆ (Institution) ಮತ್ತು ಪಠ್ಯಕ್ರಮಗಳನ್ನು ಸಿದ್ಧಪಡಿಸಬೇಕಾಗಿದೆ ಎಂದು ತಿಳಿಸಿದರು. ಹೊಸ ಕೋರ್ಸುಗಳಿಗೆ ಸಂಯೋಜನೆ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ಪ್ರಸ್ತಾಪಿತ ಕೋರ್ಸುಗಳು ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿ ಇರುವ ಕುರಿತು ಮತ್ತು ಸದರಿ ಕೋರ್ಸಿನ ಪಠ್ಯಕ್ರಮ ಲಭ್ಯವಿರುವುದನ್ನು ಖಚಿತ ಪಡಿಸಿಕೊಂಡು ಅಂತಹ ಕೋರ್ಸುಗಳಿಗೆ ಸಂಯೋಜನೆ ಶಿಫಾರಸ್ಸು ಮಾಡಬೇಕೆಂದು ತಿಳಿಸಿದರು.

ನಿರ್ಣಯ:

ಎಂ.ಎಸ್ಸಿ (ನ್ಯೂಟ್ರಿಶನ್ ಮತ್ತು ಡಯಟಿಟಿಕ್ಸ್) ಕೋರ್ಸನ್ನು ಅಳವಡಿಸಲು (Institution) ಹಾಗೂ ಪಠ್ಯಕ್ರಮ ಸಿದ್ಧಪಡಿಸಿ ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.

3. ಸದಸ್ಯರಾದ ಡಾ. ಎನ್ ನರಸಿಂಹಮೂರ್ತಿ ಯವರು ಬಿ.ಕಾಮ್ (ಹಾನರ್ಸ್) ಎಂಬ 3 ವರ್ಷದ ಕೋರ್ಸು ವಾಣಿಜ್ಯ ನಿಕಾಯದಲ್ಲಿ ಕೆಲವು ಕಾಲೇಜುಗಳಲ್ಲಿ ಕಳೆದ ವರ್ಷದಿಂದ ಪ್ರಾರಂಭಿಸಿರುತ್ತಾರೆ, NEP ಪ್ರಕಾರ ಎಲ್ಲ 4 ವರ್ಷದ ಕೋರ್ಸುಗಳಿಗೆ "ಹಾನರ್ಸ್" ಪದವಿ ನೀಡಲು ತೀರ್ಮಾನಿಸಿರುವುದರಿಂದ, ಈ 3 ವರ್ಷದ ಕೋರ್ಸು ಅಸ್ತಿತ್ವ ಕಳೆದುಕೊಳ್ಳುತ್ತದೆ ಕಾರಣ ಇದನ್ನು ಮುಂದುವರೆಸಬಾರದು ಎಂದು ಹೇಳಿದರು.

ನಿರ್ಣಯ:

ಬಿ.ಕಾಮ್ (ಹಾನರ್ಸ್) 3 ವರ್ಷದ ವ್ಯಾಸಂಗವನ್ನು 2021-22ನೇ ಸಾಲಿನಿಂದ ಸ್ಥಗಿತಗೊಳಿಸಬೇಕೆಂದು ವಿದ್ಯಾ ವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.

4. ಸದಸ್ಯರಾದ ಶ್ರೀ ಕೆ. ಎಸ್. ವೆಂಕಟೇಶ್ ರವರು ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಸದಸ್ಯರಾಗಿ ನಾಮನಿರ್ದೇಶನ ಮಾಡುವಾಗ ಸದಸ್ಯರ ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್ ವಿಳಾಸವನ್ನು ನಮೂದಿಸಬೇಕು ಎಂದು ಸಲಹೆ ಮಾಡಿದರು.

ಕುಲಸಚಿವರು ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು